ಬಸವಾದಿ ಶರಣರ

ಇಷ್ಟಲಿಂಗ ಪೂಜಾ ವಿಧಾನ

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ
ರಾಮದುರ್ಗ - 591123 ಜಿ. ಬೆಳಗಾವಿ

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಬಸವ ಜಯಂತಿ ಆಚರಣೆಯ ಶತಮಾನೋತ್ಸವದ ಪ್ರಕಟಣೆ
(೧೯೧೩-೨೦೧೩)

ಬಸವಾದಿ ಶರಣರ

ಇಷ್ಟಲಿಂಗ ಪೂಜಾ ವಿಧಾನ

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಎಂ. ಎ. (ತತ್ವಜ್ಞಾನ), ಎಲ್‌ಎಲ್.ಬಿ.(ಸ್ಪೇಶಲ್)
ಎಂ. ಎ. (ಹಿಂದಿ), ಎಂ.ಎ. (ಕನ್ನಡ) ಪಿ.ವಾಯ್.ಇಡಿ.(ಯೋಗ)

ಗೌ॥ ಸಂಪಾದಕರು, ಬಸವ ಬೆಳಗು ಪತ್ರಿಕೆ

೨೦೧೩

ಜಗಜ್ಯೋತಿ ಬಸವೇಶ್ವರ ಅನುಭಾವಪೀಠ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಬಸವಾದಿ ಶರಣರ

ಇಷ್ಟಲಿಂಗ ಪೂಜಾ ವಿಧಾನ

ಲೇಖಕರು : **ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)**
ಎಂ. ಎ. (ತತ್ವಜ್ಞಾನ), ಎಲ್‌ಎಲ್.ಬಿ.(ಸ್ಪೇಶಲ್)
ಎಂ. ಎ. (ಹಿಂದಿ), ಎಂ.ಎ. (ಕನ್ನಡ) ಸಿ.ವಾಯ್.ಇಡಿ.(ಯೋಗ)

ಗೌ॥ ಸಂಪಾದಕರು, ಬಸವ ಬೆಳಗು ಪತ್ರಿಕೆ
ರಾಮದುರ್ಗ-೫೯೧ ೧೨೩ ಜಿ. : ಬೆಳಗಾವಿ

© : ಲೇಖಕರವು

ಪ್ರಕಾಶಕರು : ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ

ಮೊದಲನೆಯ ಮುದ್ರಣ : ಫೆಬ್ರುವರಿ ೧೯೮೫
ಹನ್ನೊಂದನೆಯ ಮುದ್ರಣ : ನವ್ಹೆಂಬರ್ ೨೦೧೩

ಪ್ರತಿಗಳು : ೧,೦೦೦ ಪುಟಗಳು : ೩೪

ಬೆಲೆ : **೨೦-೦೦ (ಇಪ್ಪತ್ತು ರೂಪಾಯಿಗಳು)**

ಬಳಸಿದ ಕಾಗದ : ೬೮ ಜಿ.ಎಸ್.ಎಂ. (೧೮.೧ ಮ್ಯಾಪಲಿಥೋ)

ಮುಖಪುಟ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು : **ಶ್ರೀ ಹುಚ್ಚೇಶ್ವರ ಆಫ್‌ಸೆಟ್ ಪ್ರಿಂಟರ್ಸ್,**
ರಾಮದುರ್ಗ-೫೯೧ ೧೨೩. ಜಿ॥ ಬೆಳಗಾವಿ
ದೂರವಾಣಿ : ೦೮೩೩೫-೨೪೧೦೬೩

ಅರ್ಪಣೆ

೨೦ನೇ ಶತಮಾನದ ಬಸವ ಚೇತನ ಶರಣರು

ವಚನ ಸಂಶೋಧನ ಪಿತಾಮಹ
ಪೂಜ್ಯ ಫ. ಗು. ಹಳಕಟ್ಟಿಯವರು
(೧೮೮೧ - ೧೯೬೪)

ನಿರಂಜನ ಶರಣ
ಪೂಜ್ಯ ಹರ್ಡೇಕರ ಮಂಜಪ್ಪನವರು
(೧೮೮೬ - ೧೯೪೭)

ಲೋಕದಂತೆ ಬಾರರು, ಲೋಕದಂತೆ ಇರರು
ಲೋಕದಂತೆ ಹೋಗರು ನೋಡಯ್ಯ
ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು ನೋಡಯ್ಯ
ಉರಿಲಿಂಗದೇವಾ ನಿಮ್ಮ ಶರಣರು
ಉಪಮಾತೀತರಾಗಿ ಉಪಮಿಸಬಾರದು.

-ಶರಣ ಉರಿಲಿಂಗದೇವರ ವಚನ

ಭಕ್ತಿಪೂರ್ವಕ ಶರಣು-ಶರಣಾರ್ಥಿಗಳು
-ಪ್ರೊ ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಲೇಖಕರ ನಿವೇದನೆ

ಬಸವಕಲ್ಯಾಣದ ಬಸವಾದಿ ಶರಣರ ಕರುಣೆಯಿಂದ ಮರ್ತ್ಯಲೋಕದ ಮಹಾಮನೆಯಲ್ಲಿ ಜನಿಸಿ, ಬಸವಗುರು ಕಾರುಣ್ಯವ ಪಡೆದು, ಬಸವತತ್ತ್ವದ ಮಹಾಮಣಿಹ ಪೂರೈಸುವ ಕೈಂಕರ್ಯಕೈಕೊಂಡು, ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ ಪ್ರಾರಂಭಿಸಿ (೧೯೭೭) ಬಸವಾದಿ ಶರಣರ ಅರಿವು-ಆಚಾರ ಅನುಭಾವಗಳನ್ನು ಮನ-ಮನೆಗಳಿಗೆ ಮುಟ್ಟಿಸುವ ಸಂಕಲ್ಪದೊಂದಿಗೆ ಇಂದಿಗೆ ೩೬ ವರುಷಗಳಿಂದ ಕಾರ್ಯ ನಡೆಸುತ್ತಾ ಬರಲಾಗಿದೆ.

ಧಾರವಾಡದಲ್ಲಿ ಬಸವತತ್ತ್ವ ಪ್ರಸಾರ ಸಂಸ್ಥೆ ಸ್ಥಾಪಿಸಿ, ವಚನ ಸಂಶೋಧನಾ ಪಿತಾಮಹ ಫ. ಗು. ಹಳಕಟ್ಟಿ ಶರಣರ ಶತಮಾನೋತ್ಸವ ಆಚರಿಸಿ ಶಿವಾನುಭವ ಪತ್ರಿಕೆ ಪ್ರಾರಂಭಿಸಲಾಯಿತು. (೧೯೭೯-೮೦) ಇಳಕಲ್ಲದ ಪೂಜ್ಯ ಮಹಾಂತ ಶಿವಯೋಗಿಗಳವರ ಸದಿಚ್ಛೆ ಅಪ್ಪಣೆಯಂತೆ ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕತ್ವ ವಹಿಸಿ, ಶಿವಾನುಭಾವ ತರಬೇತಿ ಶಿಬಿರಗಳನ್ನು (೧೯೭೭) ರಿಂದ ಏರ್ಪಡಿಸುತ್ತಾ ಬರಲಾಗಿದೆ.

ನಿರಂಜನ ಶರಣ ಹರ್ಡೇಕರ ಮಂಜಪ್ಪನವರ ಶತಮಾನೋತ್ಸವ (೧೯೮೬ ರಲ್ಲಿ) ಆಚರಿಸಿ, 'ಶರಣ ಸಂದೇಶ'ವನ್ನೇ 'ಬಸವ ಬೆಳಗು' ಎಂಬ ನೂತನ ಹೆಸರಿನಿಂದ ಪತ್ರಿಕೆ ಪ್ರಾರಂಭಿಸಿ, ಅದರ ಗೌ॥ ಸಂಪಾದಕನಾಗಿ ಕಾರ್ಯ ನಿರ್ವಹಿಸುತ್ತಾ ಬರಲಾಗಿದೆ.

ಪೂಜ್ಯ ಮಹಾಂತ ಶಿವಯೋಗಿಗಳ ನೇತೃತ್ವದಲ್ಲಿ ಆಂಗ್ಲನಾಡಿಗೆ (೧೯೯೦ರಲ್ಲಿ) ಹೋಗಿ ಬಸವತತ್ತ್ವ ಪ್ರಸಾರಗೈದು, 'ಬಸವ ಇಂಟರ್ ನ್ಯಾಶನಲ್ ಫೌಂಡೇಶನ್ ಲಂಡನ್' ಎಂಬ ಅಂತರಾಷ್ಟ್ರೀಯ ಸಂಸ್ಥೆ ಪ್ರಾರಂಭಿಸಲಾಗಿದೆ. ಇಂದು ಹತ್ತಾರು ದೇಶಗಳಲ್ಲಿ ಸಂಸ್ಥೆಯು ಕಾರ್ಯಗೈಯುತ್ತಿದೆ. ೧೯೯೭ ಜನೇವರಿ ೧೪ ರಂದು ಚಿತ್ತರಗಿ ಸಂಸ್ಥಾನ ಮಠದಲ್ಲಿ ಬಸವ ಕೇಂದ್ರ ಪ್ರಾರಂಭಿಸಿ ಕಾರ್ಯಕ್ರಮ ನಡೆದಿವೆ.

ಬಸವ ಭಕ್ತಿ ಸಂಪನ್ನ ಇಷ್ಟ ಲಿಂಗಧಾರಿಗಳಿಗೆ ಸರಳ ಸುಲಭವಾಗಿರಲೆಂದು ಈ ಇಷ್ಟ ಲಿಂಗ ಪೂಜಾ ವಿಧಾನ ಪುಸ್ತಕವನ್ನು ಬರೆದು ಪ್ರಕಟಿಸಲಾಗಿದೆ. ಬಸವ ತಂದೆಯ ಕರುಣೆ ಇರಲಿ.

ರಾಮದುರ್ಗ
೦೧-೧೧-೨೦೧೩

- ಸಿದ್ಧಣ್ಣ ಲಂಗೋಟಿ
ಸಂಪಾದಕರು, ಬಸವ ಬೆಳಗು ಪತ್ರಿಕೆ

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಬಸವಾದಿ ಶರಣರ
ಇಷ್ಟಲಿಂಗ ಪೂಜಾ ವಿಧಾನ

ಅರಿವು-ಆಚಾರ-ಅನುಭಾವವುಳ್ಳ ಬಸವಭಕ್ತ ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆಯನ್ನು ಹೊಂದಿದ, ಸದ್ಭಕ್ತನು ತನ್ನ ಬಾಳನ್ನು ಶರಣ ಜೀವನವಾಗಿ ಸಾಗಿಸಬೇಕು. ಕಾಯಕ-ದಾಸೋಹ-ಪ್ರಸಾದಗಳನ್ನು ಅನವರತ ಲಿಂಗದ ನೆನಹಿನಲ್ಲಿ ಮಾಡಬೇಕು. ಅಂತರಂಗ-ಬಹಿರಂಗವೆಂಬ ಭೇದವಿಲ್ಲದೆ ಒಳ ಹೊರಗೆ ಒಂದಾಗಿ ಲಿಂಗಜೀವನ ಸಾಗಿಸುವ ಸದಾಚಾರಿ ಲಿಂಗಭಕ್ತನು ಲಿಂಗಧ್ಯಾನಗೈಯುತ್ತ ಶಿವಯೋಗ ನಿದ್ರೆ ಮಾಡಿ, ಬೆಳಗಿನ ಜಾವ ಸುಪ್ರಭಾತ ಸಮಯದಲ್ಲಿ ಏಳಬೇಕು. ಎಚ್ಚರಿಕೆ ಕಾಯಕದ ಮುತ್ತಣ್ಣ ಶರಣರು ತಿಳಿಸಿರುವಂತೆ-

ಅಂಗವಿಕಾರ ಸಾಕೇಳಿ,
ಬಹುವಿಧದಂಗ ಪ್ರಕೃತಿಯ ಮರೆದೇಳಿ
ನಿಮ್ಮ ಭಕ್ತಿ ಮುಕ್ತಿಯ ಲಿಂಗದ ಕೂಟವ ನೆನೆದೇಳಿ
ನಿಮ್ಮ ಗುರುವಾಜ್ಞೆಯ, ನಿಮ್ಮ ವಿರಕ್ತಿಯ,
ಅರಿವಿನ ಸಾವಧಾನವ ಅರಿದೇಳಿ,
ಸಾರಿದೆ-ಏವೆ ಹಳಚಿದಡಿಲ್ಲ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ
ಕುರಂಗೇಶ್ವರ ಲಿಂಗವ ಕೂಡಬಲ್ಲಡೆ,

ಪ್ರತಿಯೊಬ್ಬ ಲಿಂಗಧಾರಿಯು ಈ ಮೇಲಿನ ವಚನದ ಆಶಯವನ್ನು ಮನಗಾಣ ಬೇಕು.

ಸುಪ್ರಭಾತ ಸಯಮದಲಿ ಎಚ್ಚರಾಗಿ, ಹಾಸಿಗೆಯಲ್ಲಿ ಎದ್ದು ಕುಳಿತು **'ಬಸವಾ ಬಸವಲಿಂಗ ಬಸವ ಪ್ರಭುವೇ ಶರಣು'** ಎಂದು ಇಷ್ಟಲಿಂಗಕ್ಕೆ ನಮಿಸಿ ಮೇಲೇಳಬೇಕು.

ತದನಂತರ ಮುಖತೊಳೆದು ವಿಭೂತಿಧಾರಣೆ ಮಾಡಿಕೊಂಡು, ದೊಡ್ಡ ತಂಬಿಗೆ ತೆಗೆದುಕೊಂಡು ಬಹಿರ್ದೆಸೆಗೆ (ಶೌಚಕ್ಕೆ) ಹೋಗಬೇಕು. 'ಕೂಡಲ ಸಂಗನ ಒಲಿಸ ಬಂದ ಪ್ರಸಾದ ಕಾಯ ಕೆಡಿಸಬಾರದು' ಎಂಬ ಕಾರಣದಿಂದ ಶೌಚಾದಿ ಕ್ರಿಯೆಗಳ ತರುವಾಯ ವಾಯು ವಿಹಾರ, ವ್ಯಾಯಾಮ ಮತ್ತು ಯೋಗಾಸನಗಳನ್ನು

ಮಾಡಬೇಕು. ಕೃಷಿ-ಕಾರ್ಮಿಕರಿಗೆ ದೈಹಿಕ ಶ್ರಮ ದಿನಾಲೂ ಅವರ ಕಾಯಕದಲ್ಲಿ ಸಹಜವಾಗಿಯೇ ಆದರೆ, ಬುದ್ಧಿ ಜೀವಿಗಳಿಗೆ, ವ್ಯಾಪಾರಸ್ಥರಿಗೆ ಬೆಳಗಿನ ಜಾವ ದೈಹಿಕ ವ್ಯಾಯಾಮ ಬೇಕೇ ಬೇಕಾಗುತ್ತದೆ.

ವ್ಯಾಯಾಮದ ನಂತರ ಸ್ವಲ್ಪ ವಿಶ್ರಾಂತಿ ಪಡೆದು, ಶರೀರ ಸ್ವಚ್ಛತೆಗಾಗಿ ತಣ್ಣೀರು (ಉಗುರು ಬೆಚ್ಚಗಿನ ನೀರು) ಸ್ನಾನ ಮಾಡಬೇಕು. ತದನಂತರ ಶುಭ್ರ ಬಟ್ಟೆ ಧರಿಸಿ, ಮನೆಯಲ್ಲಿಯೇ ಇಷ್ಟಲಿಂಗ ಪೂಜೆಗಾಗಿ ವ್ಯವಸ್ಥೆ ಮಾಡಿಕೊಂಡಿರುವ ಪೂಜಾ ಕೋಣೆಗೆ ತೆರಳಬೇಕು.

ಲಿಂಗದೇಹಿಯು ಸದಾ ಶುಚಿಯಾಗಿರುವವನಾದ್ದರಿಂದ ಮಡಿ-ಹುಡಿ ಮೈಲಿಗೆ ಎಂದು ಕರ್ಮಠತನದ ಮೂಢ ಕಂದಾಚಾರಗಳನ್ನು ಮಾಡಬಾರದು. ಲಿಂಗದ ನೆನಹಿನಲ್ಲಿ ಸ್ನಾನಮಾಡಿ ಪೂಜಾಕೋಣೆಗೆ ತೆರಳಬೇಕು.

ಇಷ್ಟಲಿಂಗ ಪೂಜೆ : ಇಷ್ಟಲಿಂಗ ಪೂಜೆಗೆ ಒಂದು ಕಟ್ಟಿಗೆಯ ಅಗಲವಾದ ಮಣೆ ಅಥವಾ ಖಾದಿ ಬಟ್ಟೆಯ ದಪ್ಪವಾದ ಆಸನವಿದ್ದರೆ ಒಳ್ಳೆಯದು. ಒಂದು ತಂಬಿಗೆ ನೀರು, ಮಜ್ಜನ ಪಾತ್ರೆ, ಪತ್ರಿ-ಪುಷ್ಪ, ವಿಭೂತಿ, ಊದುಬತ್ತಿ, ಹರಳೆಣ್ಣೆಯ ದೀಪ, ಗಂಟೆ, ಗಂಧ, ಇತ್ಯಾದಿ (ಅನುಕೂಲವಿದ್ದರೆ ಮಾತ್ರ) ಹೊಂದಿಸಿಕೊಂಡಿರಬೇಕು. ಜನ ಸಾಮಾನ್ಯರಿಗೆ ಇಷ್ಟೆಲ್ಲಾ ಅನುಕೂಲವಾಗದಿದ್ದರೆ, ನೀರು ವಿಭೂತಿ ಎರಡೇ ಸಾಕು.

ನಮ್ಮ ತನು-ಮನ-ಭಾವ ತೃಪ್ತಿಗೆ ಪೂಜೆ ಎಂಬುದನ್ನು ನೆನಪಿನಲ್ಲಿಡಬೇಕು. ಪೂಜಾ ಕೋಣೆಯಲ್ಲಿ ಜಗುಲಿ ಇತ್ಯಾದಿಗಳನ್ನು ಮಾಡಿ ನೂರೆಂಟು ದೇವಾನು-ದೇವತೆಗಳು, ಕಲ್ಲು-ಕಟ್ಟಿಗೆ-ಮಣ್ಣು-ಬೆಳ್ಳಿ-ಬಂಗಾರಗಳ ಯಾವ ಮೂರ್ತಿಗಳನ್ನು ಇಟ್ಟು ಪೂಜಿಸಬಾರದು. ವಿಶ್ವದ ಆಕಾರದಲ್ಲಿ ತನ್ನ ಸ್ವ ಸ್ವರೂಪದ ಕುರುಹಾದ ಇಷ್ಟಲಿಂಗದೇವನನ್ನು ಪೂಜಿಸುವವರು ಲಿಂಗಭಕ್ತರಾದ ಕಾರಣ ಬಹುದೇವೋಪಾಸನೆ ಲಿಂಗವಂತರಿಗೆ ಸಂಬಂಧವಿಲ್ಲ, ಮಾಡಬಾರದು.

ಲಿಂಗಪೂಜಾ ಕೋಣೆಯಲ್ಲಿ ಧರ್ಮಗುರು ಬಸವಣ್ಣನವರ ಭಾವಚಿತ್ರ, ಶರಣರ ವಚನ ಫಲಕಗಳು, ಮತ್ತು ಲಿಂಗಪೂಜಾನಿಷ್ಠ ಶರಣ-ಶಿವಯೋಗಿಗಳ ಭಾವ ಚಿತ್ರಗಳಿರಬೇಕು. ಇದರಿಂದ ಅವರ ಆದರ್ಶ ಸದಾ ನೆನಪಿಗೆ ಬರುತ್ತಿರುವುದು.

ಪದ್ಮಾಸನ ಅಥವಾ ಸುಖಾಸನದಲ್ಲಿ ಕುಳಿತು ಪೂಜೆ ಮಾಡಿಕೊಳ್ಳಬೇಕು.

ಧರ್ಮ ಗುರು ಸ್ಮರಣೆ : ಇಷ್ಟಲಿಂಗ ಪರಂಪರೆಯ ವಿಶ್ವ ವಿನೂತನವಾದ ಸಮತೆಯ ಧರ್ಮವನ್ನಿತ್ತ ಧರ್ಮಗುರು ಬಸವಣ್ಣನವರನ್ನು ಸ್ಮರಿಸಬೇಕು.

ಬಸವಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೆ ಭಕ್ತಿ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ.

-ಸಿದ್ಧರಾಮೇಶ್ವರರು

ಈ ರೀತಿ ಬಸವಗುರು ಸ್ತೋತ್ರದ ವಚನಗಳನ್ನು ಪಠಿಸಿ, ಧ್ಯಾನಿಸಿ ಬಸವ ಪ್ರಣವದಿಂದ ಪರಿಶುದ್ಧಗೊಳಿಸಿದ ಕ್ರಿಯಾಭಸ್ಮವನ್ನು ತೆಗೆದು ಕೊಳ್ಳಬೇಕು.

ಭಸ್ಮ ಧಾರಣ : ವಿಭೂತಿಯನ್ನು ಮಧ್ಯದ ಮೂರು ಬೆರಳುಗಳಿಂದ ಹಣೆ, ಕುತ್ತಿಗೆ, ಎದೆ, ನಾಭಿ, ಭುಜಗಳು, ಮೊಳಕೈ, ರಟ್ಟೆ, ಪಕ್ಕೆಗಳು, ಬೆನ್ನು, ಶಿರ, ಪಾದಗಳಿಗೆ ಧರಿಸಬೇಕು. ವಿಭೂತಿ ಧಾರಣ ಮಾಡುವಾಗ ಕೆಳಗಣ ವಚನ ಸ್ಮರಿಸಿಕೊಳ್ಳಬೇಕು, ಪಠಿಸಬೇಕು.

ನೀರಿಂಗೆ ನೈದಿಲೆಯೇ ಶೃಂಗಾರ
ಸಮುದ್ರಕ್ಕೆ ತೆರೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ
ಗಗನಕ್ಕೆ ಚಂದ್ರಮನೆ ಶೃಂಗಾರ
ನಮ್ಮ ಕೂಡಲಸಂಗನ ಶರಣರ ನೊಸಲಿಗೆ
ಶ್ರೀ ವಿಭೂತಿಯೇ ಶೃಂಗಾರ.

-ಬಸವಣ್ಣನವರು

ರುದ್ರಾಕ್ಷಿ ಧಾರಣ : ಸಮ್ಯಕ್ ದೃಷ್ಟಿ ಆಳವಡುವ ಸಂಕೇತವಾಗಿ ಮತ್ತು ಅಷ್ಟಾವರಣಗಳಲ್ಲಿ ಒಂದಾದ ರುದ್ರಾಕ್ಷಿಯನ್ನು ಕಂಠದಲ್ಲಿ ಧರಿಸಬೇಕು.

ಅಯ್ಯಾ, ಎನಗೆ ರುದ್ರಾಕ್ಷಿಯೇ ಸರ್ವಪಾವನ;
ಅಯ್ಯಾ, ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ;
ಅಯ್ಯಾ, ನಿಮ್ಮ ಪಂಚವಕ್ತ್ರಂಗಳೇ
ಪಂಚಮುಖದ ರುದ್ರಾಕ್ಷಂಗಳಾದುವಾಗಿ
ಅಯ್ಯಾ ಕೂಡಲಸಂಗಮದೇವಾ
ಎನ್ನ ಮುಕ್ತಿಪಥಕ್ಕೆ ಈ ರುದ್ರಾಕ್ಷಿ ಸಾಧನವಯ್ಯಾ.

ಜಲಶುದ್ಧಿ : ತಂಬಿಗೆಯಲ್ಲಿಯ ನೀರನ್ನು ಒಂದು ಲೋಟಕ್ಕೆ ಹಾಕಿಕೊಂಡು ಬಲಗೈಯ ಐದೂ ಬೆರಳುಗಳಿಗೆ 'ಬಸವಾ' ಎಂಬ ಪ್ರಣವಾಕ್ಷರದಿಂದ ವಿಭೂತಿ

ಸ್ಪರ್ಶಿಸಿ ಆ ಐದೂ ಬೆರಳುಗಳನ್ನು ಬಟ್ಟಲದಲ್ಲಿರುವ ಜಲದಲ್ಲಿ ಬಸವಾ-ಬಸವಾ ಎಂದು ಎದ್ದಬೇಕು. ಈ ರೀತಿ ಜಲವನ್ನು ಬಸವಮಂತ್ರದಿಂದ ಶುದ್ಧ ಮಾಡಿ-ಕೊಳ್ಳಬೇಕು.

ಇಷ್ಟಲಿಂಗಕ್ಕೆ ಮಜ್ಜನ : ಕೊರಳಲ್ಲಿ ಧರಿಸಿರುವ ಇಷ್ಟಲಿಂಗವನ್ನು ಎಡಹಸ್ತದಲ್ಲಿ ತೆಗೆದುಕೊಂಡು ಬಲಗೈಯಲ್ಲಿ ಲೋಟ ತೆಗೆದುಕೊಂಡು ಮಜ್ಜನ ಪಾತ್ರೆಯಲ್ಲಿ ಎಡಗೈ ಹಿಡಿದು 'ಬಸವಾ ಬಸವಾ' ಎಂದು ಲಿಂಗಕ್ಕೆ ಮಜ್ಜನಕ್ಕೆರೆಯಬೇಕು.

ಸಜ್ಜನಳಾಗಿ ಮಜ್ಜನಕ್ಕೆರೆವೆ
ಶಾಂತಳಾಗಿ ಪೂಜೆಯಗೈಯುವೆ
ಸಮರತಿಯಿಂದ ನಿಮ್ಮಹಾಡುವೆ
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ
ಚೆನ್ನಲ್ಲಿಕಾರ್ಜುನಾ

-ವೈರಾಗ್ಯ ನಿಧಿ ಅಕ್ಕಮಹಾದೇವಿ

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂತ್ತತ್ತ ನಿಮ್ಮ ಶ್ರೀ ಮುಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ
ಕೂಡಲ ಸಂಗಮದೇವಾ, ನೀವೆನ್ನ ಕರಸ್ಥಲಕೆ ಬಂದು
ಚುಳುಕಾದಿರಯ್ಯಾ

-ಧರ್ಮಗುರು ಬಸವಣ್ಣನವರು

ಇಷ್ಟಲಿಂಗಾರ್ಚನೆ : ಇಷ್ಟಲಿಂಗದೇವನಿಗೆ ಮಜ್ಜನವಾದ ನಂತರ, ಶುಭ್ರ ಮೃದುವಾದ ಬಟ್ಟೆಯಿಂದ ಲಿಂಗವನ್ನು ಒರೆಸಿ, ಎಡ ಅಂಗೈಯಲ್ಲಿ ಷಟ್‌ಸ್ಥಲ ಚಿನ್ಹ ಬರೆದು, ಎಡಗೈ ಹೆಬ್ಬೆರಳಿನ ಕಡೆಗೆ ಜಲಹರಿಯ ಗುರುತು ಇರುವಂತೆ ಇಷ್ಟಲಿಂಗ-ದೇವನನ್ನು ಇರಿಸಿಕೊಳ್ಳಬೇಕು. ಪರಮಶಾಂತಿಯಚಿತ್ತ ಆವರಿಸುವ ಸಂಕೇತವಾಗಿ ಶ್ರೀಗಂಧವನ್ನು ಧರಿಸಿ; ಸದುವಿನಯ ಕೃತಜ್ಞತೆ ಅಕ್ಷಯದ ಸಂಕೇತವಾಗಿ ಅಕ್ಷತೆಯನ್ನು ಅರ್ಪಿಸಿ, ಅರಿವು-ಆಚಾರ-ಅನುಭಾವ ಸಂಕೇತವಾದ ತ್ರಿದಳ ಪತ್ರಿಯನ್ನು ಏರಿಸಿ, ಸದ್ಭಾವ ಸಂಕೇತವಾದ ಪುಷ್ಪವನೇರಿಸಿ. ಒಡಲದುರ್ಗುಣಗಳನುರುಹಿದ ಸಂಕೇತವಾಗಿ ಭಾವಶುದ್ಧಿಯ ಧೂಪವನರ್ಪಿಸಿ, ಮರಸದ ಸಂಕೇತವಾಗಿ ಕರ್ಪೂರ ಬೆಳಗಿ, ಸಕ್ಕರೆ ಬಾಳೆಹಣ್ಣಿನ ಪ್ರಸಾದ ಎಡೆಮಾಡಿ, ಸಾವಕಾಶವಾಗಿ ಓಂಕಾರ ಪ್ರಣವ

ನಾದ ವಾತಾವರಣದಲ್ಲಿ ಝೇಂಕಾರ ಗೈಯ್ಯುವಂತೆ ಗಂಟೆ ನುಡಿಸಿ, ಅನಿಮಿಷ ದೃಷ್ಟಿಯಿಂದ ಇಷ್ಟಲಿಂಗಯೋಗ (ಲಿಂಗ ನಿರೀಕ್ಷಣೆಗೆ ತೊಡಗಬೇಕು) ಮಾಡಬೇಕು.

ಅಂಗೈಯೊಳಗಣ ಇಷ್ಟಲಿಂಗವು ಮೂಗಿನ ತುದಿಯ ಸಮನಾಗಿ, ನೇರದಲ್ಲಿ ಹನ್ನೆರಡು ಅಂಗುಲ ದೂರವಿರುವಂತೆ ಹಿಡಿದು ಲಿಂಗ ನಿರೀಕ್ಷಣೆ ಪ್ರಾರಂಭಿಸಬೇಕು.

ಜಗವನೊಳಕೊಂಡ ಲಿಂಗವು
ಸೊಗಸಿಂದೆ ಎನ್ನ ಕರಸ್ಥಲಕೆ ಬಂದಿರಲು
ಕಂಡು ಹಗರಣವಾಯಿತ್ತೆನಗೆ.
ಗುರುಲಿಂಗ ಜಂಗಮ ಸ್ವರೂಪವಾಗಿ
ಮೂರ್ತಿಗೊಂಡಿತ್ತು ನೋಡಾ,
ಆಹಾ ಎನ್ನ ಪುಣ್ಯವೇ। ಆಹಾ ಎನ್ನ ಭಾಗ್ಯವೇ
ಆಹಾ ಅಖಂಡೇಶ್ವರಾ, ನಿಮ್ಮ ಘನವ ಕಂಡು
ಎನ್ನ ಮನಕ್ಕೆ ಮಂಗಲವಾಯಿತ್ತು ನೋಡಾ.

-ಷಣ್ಮುಖ ಸ್ವಾಮಿಗಳು

ಅಂಗೈಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವರಿವುತ್ತ ಸುರಿಯುತ್ತ ಎಂದಿಪ್ಪೆನೋ ?
ನೋಟವೇ ಪ್ರಾಣವಾಗಿ ಎಂದಿಪ್ಪೆನೋ ?
ಕೂಟವೇ ಪ್ರಾಣವಾಗಿ ಎಂದಿಪ್ಪೆನೋ ?
ಎನ್ನಂಗ ವಿಕಾರದ ಸಂಗವಳಿದು
ಕೂಡಲಸಂಗಯ್ಯಾ, ಲಿಂಗಯ್ಯಾ
ಲಿಂಗ, ಲಿಂಗ, ಲಿಂಗವೆನ್ನುತ್ತ ?

-ಬಸವಣ್ಣನವರು

ಲಿಂಗವೆನ್ನೆ ಲಿಂಗೈಕ್ಯವೆನ್ನೆ ;
ಸಂಗವೆನ್ನೆ ಸಮರಸವೆನ್ನೆ ;
ಆಯಿತ್ತೆನ್ನೆ ಆಗದೆನ್ನೆ ;
ನೀನೆನ್ನೆ ನಾನೆನ್ನೆ ;
ಚೆನ್ನಮಲ್ಲಿಕಾರ್ಜುನಯ್ಯಾ
ಲಿಂಗೈಕ್ಯವಾದ ಬಳಿಕ ಏನೂ ಅನ್ನೆ.

-ಅಕ್ಕಮಹಾದೇವಿ

ಈ ತೆರನಾಗಿ ಶಾಂತಿ-ಸೈರಣೆ ಸಮಾಧಾನಗಳಿಂದ ತನುವು ಇಷ್ಟಲಿಂಗದಲ್ಲಿ, ಮನವು ಪ್ರಾಣಲಿಂಗದಲ್ಲಿ, ಭಾವವು ಭಾವಲಿಂಗದಲ್ಲಿ ಸಮರಸವನ್ನೈದು ಲಿಂಗವ ಪೂಜಿಸುತ್ತಾ, ಪೂಜಿಸುತ್ತಾ ತಾನೇ ಲಿಂಗವಾಗಿ, ಲಿಂಗವೇ ತಾನಾಗಿ ಆನಂದ ಭಕ್ತಿಯೊಳ್ ಓಲಾಡುತ್ತಾ ಸಮರಸವನ್ನೈದಬೇಕು. ಇದುವೇ ಲಿಂಗಾಂಗ ಸಾಮರಸ್ಯವು. ಬಸವಾ ಶಿವನೇ, ಶಿವನೇ ಬಸವನಾದ ಕಾರಣ **ಓಂ ನಮಃ ಶಿವಾಯ ಬಸವ** ಎಂಬ ಮಂತ್ರ ವನ್ನಾಗಲೀ, ಓಂಶ್ರೀ ಗುರು ಬಸವಲಿಂಗಯನಮಃ ಎಂಬ ದ್ವಾದಶಾಕ್ಷರ ಗುರು ಮಂತ್ರವನ್ನಾಗಲೀ ಜಪಿಸುತ್ತಾ ಸಮರಸ ಸ್ಥಿತಿಗೇರಬೇಕು. ಭಕ್ತಾಂಗದಿಂದ ಐಕ್ಯಾಂಗದ ವರೆಗೇರಿದ ಲಿಂಗ ಭಕ್ತನು ಮತ್ತೆ ಮರಳಿ ಭಕ್ತಸ್ಥಲಕ್ಕೆ ಬಂದು, ತಾನು ಕಂಡುಂಡ ಲಿಂಗ ಸುಖವನ್ನು ತನ್ನ ಬಾಳಿನ ಬೆಳಕಾಗಿಸಿಕೊಂಡು ಶರಣ ಜೀವನ ಮಾಡಬೇಕಾದ್ದರಿಂದ, ಪೂಜೆಯ ನಂತರ ಧರ್ಮಗುರು ಬಸವಣ್ಣನವರ ಮಂಗಲ ಹಾಡಬೇಕು.

ಗುರು ಬಸವ ಮಂಗಲ

ಜಯ ಗುರು ಜಯ ಗುರು ಬಸವಣ್ಣ
ಜಯತು ಜಗದ್ಗುರು ಬಸವಣ್ಣ ॥ಪ॥

ಜಂಗಮ ರೂಪನೆ ಬಸವಣ್ಣ
ಜಗದೋದ್ಧಾರಕ ಬಸವಣ್ಣ ॥ಅಪ॥

ಕಲ್ಯಾಣವಾಸನೆ ಬಸವಣ್ಣ
ಕಾರುಣ್ಯ ಮೂರುತಿ ಬಸವಣ್ಣ
ಕಾಯಕ ಯೋಗಿಯೇ ಬಸವಣ್ಣ
ಕೈವಲ್ಯದಾತನೆ ಬಸವಣ್ಣ ॥೧॥

ನಿರ್ಗುಣ ರೂಪನೆ ಬಸವಣ್ಣ
ನಿಷ್ಕಲಲಿಂಗನೇ ಬಸವಣ್ಣ
ಅಕಾರ ಉಕಾರ ಮಕಾರ ಮೂಲದ
ಓಂಕಾರ ನೀನೆ ಬಸವಣ್ಣ ॥೨॥

ಪರಮ ಪ್ರಭುವೆ ನೀ ಬಸವಣ್ಣ
ಪತಿತ ಪಾವನನೆ ಬಸವಣ್ಣ
ಭಕ್ತರ ಪ್ರಾಣನೆ ಬಸವಣ್ಣ
ಭವ ಭಯ ತಾರಕ ಬಸವಣ್ಣ ॥೩॥

ಕಿಂಕರ ನೀನೆ ಬಸವಣ್ಣ
ಶಂಕರ ನೀನೆ ಬಸವಣ್ಣ
ಮಂಕು ಮಾನವರ ಮದವನು ಹರಿಸಿದ
ಮಹಾದೇವ ನೀನೆ ಬಸವಣ್ಣ ॥೪॥

ಅಣುವಿನೊಳಗೆ ನೀ ಅಣುವಣ್ಣ
ಮಹದೊಳಗೆ ನೀ ಮಹವಣ್ಣ
ಶರಣರ ಹೃದಯ ನಿವಾಸನೆ ಅಣ್ಣ
ಬೇಗನೆ ಬಾರೈ ಬಸವಣ್ಣ ॥೫॥

ವಚನ ಪಠಣ-ಜಯಘೋಷ

ಬಸವಣ್ಣನೇ ತಾಯಿ, ಬಸವಣ್ಣ ನೇ ತಂದೆ
ಬಸವಣ್ಣನೇ ಪರಮ ಬಂಧುವೆನಗೆ
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಹೆಸರಿಟ್ಟ ಗುರು ಬಸವಣ್ಣನಯ್ಯಾ.

✪✪✪

ತಂದೆ ನೀನು, ತಾಯಿ ನೀನು;
ಬಂಧು ನೀನು, ಬಳಗ ನೀನು;
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ;
ಕೂಡಲಸಂಗಮದೇವಾ,
ಹಾಲಲದ್ದು, ನೀರಲದ್ದು, ನಿಮ್ಮ ಧರ್ಮ

ಶರಣಸತಿ-ಲಿಂಗಪತಿ
ಹರ ಹರ ಮಹಾದೇವ ಬಸವಾ ॥
ವಿಶ್ವ ಗುರು ಬಸವತತ್ತ್ವಕ್ಕೆ - ಜಯವಾಗಲಿ
೭೭೦ ಅಮರಗಣಂಗಳ ಕಾರ್ಯಕ್ಕೆ - ಜಯವಾಗಲಿ

ಜಾತಿಯಭೂತ - ನಾಶವಾಗಲಿ
ಲಿಂಗತತ್ತ್ವ - ಜಗದಿ ಬೆಳಗಲಿ
ಮಾನವರೆಲ್ಲ ದೇವರೆಂಬ-ಅರಿವು ಬರಲಿ
ವಿಶ್ವಕ್ಕೆ - ಶಾಂತಿಯಾಗಲಿ
ಓಂ ಶ್ರೀ ಗುರು ಬಸವಲಿಂಗಾಯ ನಮ ಃ
ಓಂ ಶ್ರೀ ಗುರು ಬಸವಲಿಂಗಾಯ ನಮ ಃ
ಓಂ ಶ್ರೀ ಗುರು ಬಸವಲಿಂಗಾಯ ನಮ ಃ

-ಶರಣು-ಶರಣಾರ್ಥಿ

ಈ ರೀತಿ ಮಂಗಲದೊಂದಿಗೆ ಇಷ್ಟಲಿಂಗ ಪೂಜೆಯನ್ನು ಸಾಂಗಗೊಳಿಸಿ, ಪಾದೋದಕ-ಪ್ರಸಾದ ಸ್ವೀಕರಿಸಬೇಕು.

ಪಾದೋದಕ ಪ್ರಸಾದ ಸ್ವೀಕಾರ : ಬಲಗೈಯ ಐದೂ ಬೆರಳುಗಳಿಗೆ ಭಸ್ಮ ಸ್ಪರ್ಶಿಸಿ, ಬಸವ ಮಂತ್ರ ಸ್ಮರಣೆಯೊಂದಿಗೆ ಲೋಟಾದಲ್ಲಿ ಎದ್ದಿ, ಅಲ್ಲಿರುವ ಶುದ್ಧ ಜಲವನ್ನು-

ಗುರುಬಸವ ಪಾದೋದಕ
ಲಿಂಗಬಸವ ಪಾದೋದಕ
ಜಂಗಮ ಬಸವ ಪಾದೋದಕ

ಎಂದು ಮೂರು ಸಲ ಕರಸ್ಥಲದ ಇಷ್ಟಲಿಂಗದ ಮೇಲೆ ಸಾವಧಾನದಿಂದ ಎರೆದು, ಬಲಗೈಯಿಂದ ಇಷ್ಟಲಿಂಗವನ್ನು ಬೀಳದಂತೆ ಹಿಡಿದು ಎಡಗೈಯೊಳಗಿರುವ ಪಾದೋದಕವನ್ನು ಶ್ರದ್ಧೆ-ನಿಷ್ಠೆಯಿಂದ ಸ್ವೀಕರಿಸಬೇಕು.

ಕರುಣಜಲ ವಿನಯಜಲ ಸಮತಾಜಲ
ಕರುಣಜಲವೇ ಗುರು ಪಾದೋದಕ
ವಿನಯ ಜಲವೇ ಲಿಂಗ ಪಾದೋದಕ
ಸಮತಾಜಲವೇ ಜಂಗಮ ಪಾದೋದಕ
ಗುರುಪಾದೋದಕದಿಂದ ಸಂಚಿತ ಕರ್ಮನಾಸ್ತಿ,
ಲಿಂಗಪಾದೋದಕದಿಂದ ಪ್ರಾರಬ್ಧ ಕರ್ಮನಾಸ್ತಿ,
ಜಂಗಮಪಾದೋದಕದಿಂದ ಆಗಾಮಿಕರ್ಮನಾಸ್ತಿ,
ಇಂತೀ ತ್ರಿವಿಧೋದಕದಲ್ಲಿ ತ್ರಿವಿಧಕರ್ಮನಾಸ್ತಿ

ಇದು ಕಾರಣ ಕೂಡಲಚೆನ್ನಸಂಗಮದೇವಾ
ತ್ರಿವಿಧೋದಕವ ನಿಮ್ಮ ಶರಣನೇ ಬಲ್ಲ.

-ಚೆನ್ನಬಸವಣ್ಣನವರು

ತದನಂತರ- ಅರಿವು-ಆಚಾರ-ಅನುಭಾವ ಪ್ರತೀಕವಾಗಿರುವ ಗುರು-ಲಿಂಗ-ಜಂಗಮ ಸ್ಮರಣೆಯಲ್ಲಿ ಇಷ್ಟಲಿಂಗಕ್ಕರ್ಪಿಸಿದ ಸಕ್ಕರೆ ಅಥವಾ ಬಾಳೆ ಹಣ್ಣನ್ನು ಶುದ್ಧ-ಸಿದ್ಧ-ಪ್ರಸಿದ್ಧ ಪ್ರಸಾದರೂಪದ ಭಾವದಲ್ಲಿ ಸ್ವೀಕರಿಸಬೇಕು.

ಪಾದೋದಕ-ಪ್ರಸಾದ ಸೇವನೆಯ ನಂತರ, ಇಷ್ಟಲಿಂಗಕ್ಕೆ ವಿಭೂತಿ ಧರಿಸಿ, ಹುದುಗು ವಸ್ತ್ರದಲ್ಲಿ 'ಬಸವ ಪ್ರಣವ' ಬರೆದು ಕರಡಿಗೆಯಲ್ಲಾಗಲೀ, ವಿಶೇಷವಾಗಿ ಇತ್ತೀಚೆಗೆ ಸುಲಭ-ಸರಳವಾಗಿ ತಯಾರಿಸಲಾಗುತ್ತಿರುವ ಅರಿವೆಯ ಚೀಲದಲ್ಲಾಗಲೀ ಇರಿಸಿ, ಕೊರಳಲ್ಲಿ ಇಷ್ಟಲಿಂಗವನ್ನು ಧರಿಸಬೇಕು. ಇಷ್ಟಲಿಂಗವು ಎದೆಯ ಮಧ್ಯ ಭಾಗದಲ್ಲಿಯೇ (ಹೃದಯದಮೇಲೆ) ಇರಬೇಕು.

ಇಷ್ಟಲಿಂಗ ಪೂಜೆಯ ನಂತರ ಸಮಯಾವಕಾಶ ಮಾಡಿಕೊಂಡು ಶ್ರೀಗುರು ಬಸವಲಿಂಗ ಸ್ತೋತ್ರ ಮತ್ತು ಶ್ರೀ ಗುರು ಬಸವಲಿಂಗ ೧೦೮ ನಾಮಾವಳಿಗಳನ್ನು ಆನಂದ ದಿಂದ ಭಕ್ತಿ ಪುರಸ್ಸರವಾಗಿ (ಪಠಿಸಬೇಕು) ಹಾಡಬೇಕು.

ಶ್ರೀಗುರು ಬಸವಲಿಂಗ ಸ್ತೋತ್ರ

ಬಸವಲಿಂಗವೆಂಬೈದಕ್ಷರಗಳು ರಸನೆಯೊಳಿರಬೇಕು,
ಶಶಿಕಾಂತದೊಳಿಹ ರಸದ ಪರಿಯೊಳೀ ವಸುಧೆಯೊಳಿರಬೇಕು ॥ಪ॥

ಅರುಹಿನ ಕುರುಹಿಡಿದವನೀತಲಕವತರಿಸಿದ ಗಣಪಾಲ
ವರಗುರುಲಿಂಗ ಸುಜಂಗಮ ಸೌಖ್ಯಾಕರ ಪಾವನಶೀಲ
ಪರಮಷಡಕ್ಷರ ಪಂಚಾಕ್ಷರವೆಂಬೆರಡರಾದಿ ಮೂಲ
ಶರಣ ಕರಮನ ಭಾವದಿಂದಲುಪಚರಿಸಿಕೊಂಬ ಲೋಲ ॥೧॥

ವೇದ ಶಾಸ್ತ್ರ ಪೌರಾಣ ನಿಗಮದಧಿ ಮಥನದ ನವನೀತ
ಸಾದೇಹದೊಳಿಹ ನಾದಬಿಂದು ಕಳೆಗತ್ತಲತ್ತತೀತ
ಮೂದೇವರ ಮುತ್ತಯ್ಯನ ಪೊತ್ತು ಸಲಹಿದೆನ್ನುವಾತ
ಭೇದಿಸಲಗಣಿತ ಬ್ರಹ್ಮಾಂಡಗಳ ಧರಿಸುವ ಪ್ರಖ್ಯಾತ ॥೨॥

ಭಕ್ತಿಯನೊಲ್ಲದ ನಿರುಪಾಧಿಕ ಸದ್‌ಭಕ್ತರಂತರಂಗ
ಮುಕ್ತಿಯ ಸೀಮೆಯ ಮೆಟ್ಟಿದವರ ಬಹಿರಂಗದಿಷ್ಟಲಿಂಗ

ಯುಕ್ತಿಯಿಂದ ಸದ್ಭಕ್ತಿಯ ಮಾಡುವರಂಗಲಿಂಗ ಸಂಗ
ಶಕ್ತಿ ಸಮೇತ ವಿರಕ್ತಿಯ ಮಾಡುವ ದೇಶಿಕರುತ್ತುಂಗ ॥೩॥

ಕಲಿಯುಗದೊಳು ಕಲ್ಯಾಣಪುರವರಾಧೀಶ್ವರ ಪ್ರಧಾನಿ
ಹಲಬರ ಮಧ್ಯದಿ ಬಿದ್ದ ಲಿಖಿತವ ತೆಗೆದೋದಿದ ಸನ್ಮಾನಿ
ಕುಲಛಲಮೊದಲಾದಷ್ಟಮದಂಗಳ ನೀಗಿದ ಸುಯ್ಜಾನಿ
ನೆಲಜಲಾಗ್ನಿ ಮರುತಂಬರಾತ್ಮಷಡುತತ್ತ್ವದ ಸುಜ್ಞಾನಿ ॥೪॥

ಭಿನ್ನ ಭಕ್ತಿ ತನಗನ್ಯವೆಂಬ ಸದ್‌ಭಕ್ತ ದೇಹಿಕದೇಹಿ
ತನ್ನ ಭಜಿಸಿ ಬಳಿಕನ್ಯವನರಿಯದ ಸಜ್ಜನ ಜನಮೋಹಿ
ಚಿನ್ನ ಬಣ್ಣದಂತೆರಡರಿಯದ ಶಿವಶರಣರಲ್ಲಿ ಸ್ನೇಹಿ
ಚೆನ್ನವೀರ ಮಹೇಶ ನಿರಂಜನ ಜಂಗಮ ದಾಸೋಹಿ ॥೫॥

-ಮೈಲಾರ ಬಸವಲಿಂಗ ಶರಣರು

೧೦೮ ಶ್ರೀ ಗುರು ಬಸವಲಿಂಗ ನಾಮಾವಳಿ

(ಕಂದ) "ಶ್ರೀ ಗುರು ಬಸವೇಶ್ವರನನುಪಮ
ವರ ನೂರಾಎಂಟು ನಾಮ ನೇಮದಿ
ಸತತಂ ಹರುಷದಿ ಪಠಿಸಲ್ ಭರದಿಂ
ಸುಚಿರಮಿಷ್ಟ ಸಕಲ ಸೌಖ್ಯ ಸಂಪದಮಕ್ಕುಂ"

ಶ್ರೀ ಮಹಾವೃಷಾಧಿಪ ಪ್ರಸಿದ್ಧ ನಾಮ ಬಸವಲಿಂಗ
ಧಾಮನಿಧಿ ಶಿಖೇಂದು ಕೋಟಿ ಧಾಮಸೀಮ ಬಸವಲಿಂಗ
ತತ್ತ್ವಮಸಿಪದೈಕ್ಯ ವಚನ ಧರ್ಮಯುಕ್ತ ಬಸವಲಿಂಗ
ಸತ್ವ ರಜ ತಮೋಗುಣ ಪ್ರಚಾರ ದೂರ ಬಸವಲಿಂಗ
ಘೋರಪಾಪ ದೋಷಪುಂಜ ಕುಜಕುಠಾರ ಬಸವಲಿಂಗ
ಸಾರಲಿಂಗವಂತ ಸಮಯ ಚಕ್ರವರ್ತಿ ಬಸವಲಿಂಗ
ವೇದಗಳಿಗೆ ನಿಲುಕದಾತನಾದಿ ನೀನು ಬಸವಲಿಂಗ
ನಾದಮೂರ್ತಿ ಎನ್ನ ಮನದ ಕ್ರೋಧವಳಿಯೋ ಬಸವಲಿಂಗ
ಹಲವು ಜನ್ಮ-ಜರೆಗಳಲ್ಲಿ ತೊಳಲಿ ಬಂದೆ ಬಸವಲಿಂಗ
ಹಲವು ಮಾತದೇತಕೆನ್ನ ಬಿಡದೆ ಸಲಹೊ ಬಸವಲಿಂಗ ॥೧೦॥

ಯೋನಿ ಮುಖದಿ ಪುಟ್ಟಿ ಪುಟ್ಟಿ ಮಾನಗಟ್ಟೆ ಬಸವಲಿಂಗ
ಮಾನವಿಟ್ಟು ನನಗೆ ಭಕ್ತಿಮಾರ್ಗ ತೋರೊ ಬಸವಲಿಂಗ
ಉದರ ಭೂಮಿಯಲ್ಲಿ ಇನ್ನು ಹುಟ್ಟಲಾರೆ ಬಸವಲಿಂಗ
ಮುದದೊಳೆನಗೆ ನಿಮ್ಮ ಪಾದ ಪದ್ಮ ತೋರೊ ಬಸವಲಿಂಗ
ಎನ್ನ ಜನನ ಮರಣ ಭಯಗಳನ್ನು ಬಿಡಿಸೊ ಬಸವಲಿಂಗ
ಸನ್ನುತ ಪ್ರಸನ್ನ ನಿನಗೆ ಶರಣು ಮಾಳ್ಪೆ ಬಸವಲಿಂಗ
ಮಾಯೆ ಎಂಬ ಬಲೆಗೆ ಸಿಲುಕಿ ಮರುಳನಾದೆ ಬಸವಲಿಂಗ
ಕಾಯೋ ಎನ್ನ ಕರ್ಮಗಳನ್ನು ಕಡೆಗೆ ಮೆಟ್ಟಿ ಬಸವಲಿಂಗ
ಹೊನ್ನು ಹೆಣ್ಣು ಮಣ್ಣು ನಂಬಿ ನಿನ್ನ ಮರೆತೆ ಬಸವಲಿಂಗ
ಮನ್ನಿಸಯ್ಯ ಜೀಯ ನಿನ್ನ ಮೊರೆಯಹೊಕ್ಕೆ ಬಸವಲಿಂಗ ॥೨೦॥

ಬರಿ ದುರಾಶೆಯಲ್ಲಿ ಬಿದ್ದು ಭ್ರಮಿತನಾದೆ ಬಸವಲಿಂಗ
ದುರುಳತನವ ಬಿಡಿಸಿ ಎನ್ನ ಕರುಣಿಸಯ್ಯ ಬಸವಲಿಂಗ
ಕಾಡುತಿರ್ಪುದೆನ್ನ ಪೂರ್ವ ಕಲುಷವಳಿಯೋ ಬಸವಲಿಂಗ
ನೋಡಿ ಮಾಣ್ಬುದೆನ್ನ ಬೇನೆ ನೋವುಗಳನು ಬಸವಲಿಂಗ
ಕಳೆಯೊ ಎನ್ನ ದುರ್ಮನೋವಿಕಾರಗಳನ್ನು ಬಸವಲಿಂಗ
ಬೆಳೆದ ಚಿತ್ತ ಸಂಚಲವನು ಕೆಡಿಸು ನೀನು ಬಸವಲಿಂಗ
ತಪ್ಪು ಎನ್ನೊಳುಂಟು ಬಹಳ ಒಪ್ಪಿಕೊಳ್ವೆ ಬಸವಲಿಂಗ
ಅಪ್ಪಿಕೊಂಡೆ ನಿನ್ನ ಪಾದಗಳನು ಸಲಹೊ ಬಸವಲಿಂಗ
ಎನ್ನೊಳಿರ್ದ ಭಿನ್ನಗುಣಗಳೆಣಿಸಲುಂಟೆ ಬಸವಲಿಂಗ
ನಿನ್ನ ಧರ್ಮವನ್ನು ಬಿಡದೆ ಎನ್ನ ಕಾಯೋ ಬಸವಲಿಂಗ ॥೩೦॥

ಕುಣಿಯುತಿರ್ಪೆ ನಾನು ನೀನು ಕುಣಿಸಿದಂತೆ ಬಸವಲಿಂಗ
ಕಣ್ಣು ಮನಕೆ ತೆರವುಗೊಟ್ಟು ಎನ್ನ ಕಾಯೋ ಬಸವಲಿಂಗ
ಕರೆದು ಬಿಡದೆ ರಕ್ಷಿಸೆನ್ನ ಕರವ ಪಿಡಿದು ಬಸವಲಿಂಗ
ಸೆರಗನೊಡ್ಡಿ ಬೇಡಿಕೊಂಬೆ ಕರುಣಿಸೆನ್ನ ಬಸವಲಿಂಗ
ಹೀನದೆಸೆಯ ಬಿಡಿಸಿ ಎನಗೆ ಇಷ್ಟನಾಗೊ ಬಸವಲಿಂಗ
ಊನವಿಲ್ಲದಮಲ ಸುಖವ ದಾನವೀಯೊ ಬಸವಲಿಂಗ
ಅಭವ ನಿನ್ನ ಹೊರತು ಕಾಯ್ವರಾರ ಕಾಣೆ ಬಸವಲಿಂಗ
ಅಭಯವಿತ್ತು ಎನ್ನ ಮೊರೆಯನಾಲಿಸಯ್ಯ ಬಸವಲಿಂಗ
ದಿಕ್ಕು ದೆಸೆಯು ನೀನೆ ಎನಗೆ ದಿಕ್ಕು ತೋರೊ ಬಸವಲಿಂಗ
ಅಕ್ಕರದಿ ಕಳೆಯೊ ಎನ್ನ ಅವಧಿಗಳನು ಬಸವಲಿಂಗ ॥೪೦॥

ಬೇಡ ಪರರ ಒಲುಮೆ ನಿನ್ನ ಬೇಡಿಕೊಂಬೆ ಬಸವಲಿಂಗ
ಕಾಡದೆನಗೆ ಕುಶಲವಿತ್ತು ಕಾಯೋ ಎನ್ನ ಬಸವಲಿಂಗ
ಬಿಡಿಸೊ ಎನ್ನ ಮನದ ಮಲಿನ ಉಡುಗೆಯನ್ನು ಬಸವಲಿಂಗ
ತೊಡಿಸೊ ಭಕ್ತಿ ಕವಚವೆಂಬ ತೊಡಿಗೆಯನ್ನು ಬಸವಲಿಂಗ
ಮೃಡನು ನೀನು ಮೂಢ ನಾನು ಬಿಡದೆ ಸಲಹೊ ಬಸವಲಿಂಗ
ಒಡೆಯ ನೀನು ಹುಡುಗ ನಾನು ಕೊಡಿಸೊ ಮುಕ್ತಿ ಬಸವಲಿಂಗ
ಶರಣ ನೀನು ನರನು ನಾನು ಬೆರೆಸಿ ಸಲಹೊ ಬಸವಲಿಂಗ
ಪರಮ ನೀನು ಜೀವ ನಾನು ಧರಿಸು ಭಸಿತ ಬಸವಲಿಂಗ
ಪತಿಯು ನೀನು ಸತಿಯು ನಾನು ಹಿತವ ತೋರೊ ಬಸವಲಿಂಗ
ಗತಿಯು ಮತಿಯು ನೀನೆ ಎನಗೆ ಸತತ ಸಲಹೊ ಬಸವಲಿಂಗ ॥೫೦॥

ತಂದೆ ನೀನೆ ಎನ್ನ ಹೆತ್ತ ತಾಯಿ ನೀನೆ ಬಸವಲಿಂಗ
ಕಂದ ಬಾರೋ ಎನುತ ಕರೆದು ಕರವ ಪಿಡಿಯೋ ಬಸವಲಿಂಗ
ಮರಹುಗೆಡಿಸಿ ನಿನ್ನ ಪಾದ ಕುರುಹದೋರೊ ಬಸವಲಿಂಗ
ಹರಿ ವಿರಂಚಿಗಳೀಗಭೇದ್ಯನಯ್ಯ ನೀನು ಬಸವಲಿಂಗ
ಪರಮಭಕ್ತ ಜನಕೆ ಪ್ರಾಣಪದವು ನೀನೆ ಬಸವಲಿಂಗ
ಶರಣ ಜನಕೆ ಬೇಡಿದಿಷ್ಟ ಪದವು ನೀನೆ ಬಸವಲಿಂಗ
ನಂಬಿ ಭಜಿಸುತಿರ್ಪವರಿಗೆ ಇಂಬು ನೀನೆ ಬಸವಲಿಂಗ
ನಂಬಿಗಿಲ್ಲದವರ ಎದೆಯೊಳಂಬು ನೀನೆ ಬಸವಲಿಂಗ
ಮೂರು ಲೋಕಗಳನ್ನು ಪೊರೆವ ಕರ್ತ ನೀನೆ ಬಸವಲಿಂಗ
ಧಾರುಣಿಯೊಳು ನಿನ್ನ ಪೋಲ್ವ ದೇವರುಂಟೆ ಬಸವಲಿಂಗ ॥೬೦॥

ಪಂಚ ಪರುಷ ವೇದ್ಯವುಳ್ಳ ಪ್ರಮುಖ ನೀನು ಬಸವಲಿಂಗ
ವಂಚನಿಲ್ಲದಚಲ ಭಕ್ತಿ ವರವ ನೀಡೊ ಬಸವಲಿಂಗ
ಎಂದಿಗಹುದು ನಿನ್ನ ಕೃಪೆಯು ನೀನೆ ಪೇಳು ಬಸವಲಿಂಗ
ಮಂದಮತಿಯು ನಾ ಮುಂದೇನನರಿಯೆ ಬಸವಲಿಂಗ
ಎನ್ನ ಕಣ್ಗೆ ನಿನ್ನ ಕಳೆಯನಿತ್ತು ಸಲಹೊ ಬಸವಲಿಂಗ
ಎನ್ನ ಕಿವಿಗೆ ನಿನ್ನ ನುಡಿಗಳಿತ್ತು ಸಲಹೊ ಬಸವಲಿಂಗ
ಎನ್ನ ಜಿಹ್ವೆ ನಿನ್ನ ಪೊಗಳುವಂತೆ ಮಾಡೊ ಬಸವಲಿಂಗ
ಭಿನ್ನ-ಭೇದವಳಿದು ಎನ್ನೊಳಿನ್ನು ನಿಲ್ಲೊ ಬಸವಲಿಂಗ
ಅನವರತವು ನಿನ್ನ ನೆನಹಿನಲ್ಲಿ ನಿಲ್ಲೊ ಬಸವಲಿಂಗ
ಮುನಿಸದೇಕೆ ಎನಗೆ ಮುದ್ದು ಮುಖವ ತೋರೊ ಬಸವಲಿಂಗ ॥೭೦॥

ನಗುತಲೊಮ್ಮೆ ಮುಖವನೆತ್ತಿ ಎನ್ನ ನೋಡೊ ಬಸವಲಿಂಗ
ಅಗಲದೆನ್ನ ಮನಸ್ಸಿನಲ್ಲಿ ಹರುಷವೀಯೊ ಬಸವಲಿಂಗ
ಬಿಜ್ಜಳಗೆ ಪ್ರಧಾನಿಯಾಗಿ ಮೆರೆದೆ ನೀನು ಬಸವಲಿಂಗ
ಮೂಜಗಂಗಳೊಳಗೆ ಕೀರ್ತಿ ಪಡೆದೆ ನೀನು ಬಸವಲಿಂಗ
ಮುತ್ತು ಮಾಡಿದೆಯ್ಯ ಜೋಳ ಮುದದಿ ನೋಡಿ ಬಸವಲಿಂಗ
ಸತ್ ಚಿತ್ ಆನಂದ ರೂಪ ಕರಕೆಯಿತ್ತೆ ಬಸವಲಿಂಗ
ಆ ಮಹಾತ್ಮ ನಿನ್ನ ಹಾಡಿ ಹೊಗಳಲಳವೆ ಬಸವಲಿಂಗ
ಪ್ರಮಥರೊಡೆಯ ನಿನ್ನ ಕೃಪೆಯು ಪಾಲಿಸೆನಗೆ ಬಸವಲಿಂಗ
ಸತ್ತವಂಗೆ ಮರಳಿ ಪ್ರಾಣವಿತ್ತು ಪೊರೆದೆ ಬಸವಲಿಂಗ
ಸತ್ಯ ಶರಣನಮಲ ಕರದಿ ಹಾಲ ಕರೆದೆ ಬಸವಲಿಂಗ ॥೮೦॥

ಅರಿತು ವಿಷವ ಕುಡಿದು ಲೋಕವರಿಯೆ ಮೆರೆದೆ ಬಸವಲಿಂಗ
ಹರಗೆ ನೊಸಲ ಕಣ್ಣು ಕೊಟ್ಟ ಸರಸ ನೀನು ಬಸವಲಿಂಗ
ಹೊರಗೆ ಒಳಗೆ ಪೂರ್ಣ ಭಕ್ತಿ ನೆರೆದು ಮೆರೆದೆ ಬಸವಲಿಂಗ
ಅರಸಿ ಉಟ್ಟ ಸೀರೆ ಬೇಡೆ ಕೊಟ್ಟೆ ನೀನು ಬಸವಲಿಂಗ
ಭಕ್ತರುಗಳ ಬೇಡಿದಿಷ್ಟ ವರವನಿತ್ತೆ ಬಸವಲಿಂಗ
ನುಡಿದ ವಾಕ್ಯ ತಪ್ಪದಂತೆ ನಡೆದು ಮರೆದೆ ಬಸವಲಿಂಗ
ಲಿಂಗ ಸಂಗವಾಗಿ ತ್ರಿವಿಧ ಅಂಗವಳಿದೆ ಬಸವಲಿಂಗ
ಸಂಗರೂಪವಾಗಿ ಜಗದ ಹಂಗುದೊರೆದೆ ಬಸವಲಿಂಗ
ಆರನಳಿದು ಮೂರ ತಿಳಿದ ಅಚಲ ನೀನು ಬಸವಲಿಂಗ
ಆರ ಮೂರರಲ್ಲಿ ಕಂಡು ಧೀರನಾದೆ ಬಸವಲಿಂಗ ॥೯೦॥

ನಲ್ಲ ಬಾರೋ ಎನ್ನ ಪ್ರಾಣನಾಥ ಬಾರೋ ಬಸವಲಿಂಗ
ಭಕ್ತ ಹೃದಯ ಕಮಲದಲ್ಲಿ ಐಕ್ಯ ನೀನು ಬಸವಲಿಂಗ
ದೊರೆಯೆ ಬಾರೊ ಎನ್ನ ಭಕ್ತಿ ಸಿರಿಯೆ ಬಾರೊ ಬಸವಲಿಂಗ
ಗುರುವೆ ಬಾರೋ ಎನ್ನೊಳಿರ್ಪ ವರವೆ ಬಾರೊ ಬಸವಲಿಂಗ
ಬಾರೊ ಎನ್ನ ಸುಪ್ರಸನ್ನ ಭಾವಸಂಗ ಬಸವಲಿಂಗ
ಬಾರೊ ಎನ್ನ ಸಕಲ ಲೋಕ ಪಾವನಾಂಗ ಬಸವಲಿಂಗ
ಅಯ್ಯ ಚಲ್ವರಾಯ ಬಾರೊ ಅಣ್ಣ ಬಾರೊ ಬಸವಲಿಂಗ
ಜೀಯ ಎನ್ನ ಮನದಿ ನಿಂತು ಹರುಷವಿಯೋ ಬಸವಲಿಂಗ
ನಿನ್ನ ನಾಮ ಕೇಳಿದವರು ನಿತ್ಯರಹರು ಬಸವಲಿಂಗ
ನಿನ್ನ ನಾಮ ಜಪಿಸಿದವರು ನೀನೆ ಕಾಣೊ ಬಸವಲಿಂಗ ॥೧೦೦॥

ನಿನ್ನ ನೆನಹು ನಿಖಿಳ ನಿರಾಕಾರವಹುದು ಬಸವಲಿಂಗ
ನಿನ್ನ ನಾಮ ಜಪಿಸೆ ದುರಿತ ಓಡುತಿಹುದು ಬಸವಲಿಂಗ
ಪಾಹಿ ಪಾಹಿ ಎನ್ನ ಪ್ರಾಣ ಪಟ್ಟದರಸ ಬಸವಲಿಂಗ
ಪಾಹಿ ಎನ್ನ ಪೊರೆವ ಬಿರುದ ತಾಳ್ದದೇವ ಬಸವಲಿಂಗ
ಜಯನಮಸ್ತೆ ನಿನಗೆ ಜಯತು ಜಯತು ಜಯತು ಬಸವಲಿಂಗ
ಜಯನಮಸ್ತೆ ಕೂಡಲಾದಿ ಸಂಗಮಯ್ಯ ಬಸವಲಿಂಗ
ಹೊಂದಿ ಸೋಮನಾಥ ಲಿಂಗವಾಗಿ ನಿಂತೆ ಬಸವಲಿಂಗ
ಅಂದದೊಳು ಶಿವೈಕ್ಯ ಪದವ ಕೊಟ್ಟು ಸಲಹೊ ಬಸವಲಿಂಗ ॥೧೦೮॥

ಬಸವಲಿಂಗ ಬಸವಲಿಂಗ ಬಸವಲಿಂಗ ಪಾಹಿಮಾಂ।
ಬಸವಲಿಂಗ ಬಸವಲಿಂಗ ಬಸವಲಿಂಗ ರಕ್ಷಮಾಂ

-ಪಾಲ್ಕುರಿಕೆ ಸೋಮನಾಥ

-ಶರಣು ಶರಣಾರ್ಥಿ-

ಇಷ್ಟಲಿಂಗ ಪೂಜೆಯ ಫಲ

-೧-

ಲಿಂಗವ ಪೂಜಿಸಿ ಫಲವೇನಯ್ಯಾ ?
ಸಮರತಿ ಸಮಕಳೆ ಸಮಸುಖವರಿಯದನ್ನಕ್ಕ !
ಲಿಂಗವ ಪೂಜಿಸಿ ಫಲವೇನಯ್ಯಾ ?
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿಯ ಬೆರೆಸಿದಂತಾಗದನ್ನಕ್ಕ !

-೨-

ಸಮಸ್ತ ಕತ್ತಲೆಯ ಮಸಕ ಕಳೆದಿಪ್ಪ
ಇರವ ನೋಡಾ !
ಬೆಳಗಿಂಗೆ ಬೆಳಗು ಸಿಂಹಾಸನವಾಗಿ
ಬೆಳಗು ಬೆಳಗ ಕೂಡಿದ ಕೂಟವ
ಕೂಡಲಸಂಗಯ್ಯ ತಾನೇ ಬಲ್ಲ.

-ವಿಶ್ವಗುರು ಬಸವಣ್ಣನವರು

ಗುರು ಬಸವ ಸ್ತುತಿ

[ರಾಗ-ಚಾಂದ್ ತಾಳ-ದೀಪಚಂದ]

ಕರುಣಾಳು ಕಲ್ಯಾಣ ವಾಸ
ಬಸವಲಿಂಗೇಶ, ಬಸವಲಿಂಗೇಶ।

ಪೊರೆಯೋ ಹೇ ಬಸವೇಶಾ
ದೇವಾಧೀದೇವ ಸಂಗನ ಬಸವ ॥ಪ॥

ಭವದಲ್ಲಿ ಬೆಂದೆ ಗತಿ ನೀನು ಮುಂದೆ
ತವಪಾದ ಒಂದೇ ಬೇಡುವೆನು ತಂದೆ
ದೇವಾಧಿದೇವ ಸಂಗನಬಸವ ॥೧॥

ಭಕ್ತಿಯ ಪಥವ ಮುಕ್ತಿಯ ನಿಲವ
ತೋರಿಸೊ ಅಭವ ಕೃಪೆಯಾಗೋ ದೇವ
ದೇವಾಧಿದೇವ ಸಂಗನಬಸವ ॥೨॥

ಶಿವಮಂತ್ರ ಪ್ರಾಣ ನೀನೆ ಪ್ರಮಾಣ
ತವನಾಮ ಸ್ಮರಣ ಭವತಾಪ ಹರಣ
ದೇವಾಧಿದೇವ ಸಂಗನಬಸವ ॥೩॥

ವಿರತಿಯ ಭಾನು ಲಿಂಗವಂತ ಧೇನು
ಪರಶಿವನೆ ನೀನು ಶರಣೆಂಬೆ ನಾನು
ದೇವಾಧಿದೇವ ಸಂಗನಬಸವ ॥೪॥

ತನುಮನ ಧನವು ನಿನಗೆ ಅರ್ಪಣವು
ಕರುಣೆ ನಿನ್ನೊಲವು ಇರಲೆಮಗೆ ಬಲವು
ದೇವಾಧಿದೇವ ಸಂಗನಬಸವ ॥೫॥

ಜಗದೇಕ ಗುರುವೆ ಜಗವ ತುಂಬಿರುವೆ
ಹೇ ಕಲ್ಪತರುವೆ ನೆನಸಿದಲ್ಲಿರುವೆ
ದೇವಾಧಿದೇವ ಸಂಗನಬಸವ ॥೬॥

- ವಿ. ಸಿದ್ಧರಾಮಣ್ಣ ಶರಣರು
ಸಂಚಾಲಕರು, ಅನುಭವ ಮಂಟಪ, ಬಸವಕಲ್ಯಾಣ

॥ಓಂ ಶ್ರೀಗುರು ಬಸವಲಿಂಗಾಯ ನಮಃ ॥

ಬಸವ ಧರ್ಮ ಬಂಧುಗಳೆ ಒಂದಾಗಿರಿ

ರಾಗ-ಚಾಂದ್ ತಾಳ-ಅಭಂಗ

ಓ.... ಬಸವಧರ್ಮ ಬಂಧುಗಳೆ ಒಂದಾಗಿರಿ
ಮತ್ತೆ ಶರಣರಾಜ್ಯ ಕಟ್ಟಲೆದ್ದೇಳಿರಿ ॥ಪ॥

ಜಾತಿಯೆಂಬ ಕಟ್ಟ ಹರಿದು ಹೊರಗೆ ಬನ್ನಿರಿ
ಶ್ರೇಷ್ಠ ವೀರಧರ್ಮವೆಂಬ ಧ್ವಜವ ಹಿಡಿಯಿರಿ ॥೧॥

ಮಂಗಲಾತ್ಮರೂಪವಾದ ಲಿಂಗ ಧರಿಸಿರಿ
ಬಸವ ಗುರುವಿನಾಣತಿಯನು ಮರೆಯ ಬೇಡಿರಿ ॥೨॥

ಇಷ್ಟ ಪ್ರಾಣ ಭಾವಲಿಂಗ ಗುಟ್ಟು ತಿಳಿಯಿರಿ
ಕಾಯಕವೆ ಕೈಲಾಸವೆಂಬ ಮಂತ್ರ ಸಾರಿರಿ ॥೩॥

ಹೃದಯವೆಂಬ ಮಹಾಮನೆಯ ಕದವ ತೆರೆಯಿರಿ
ವಿಶ್ವಮಾನವರನೆಲ್ಲ ಒಳಗೆ ಕರೆಯಿರಿ ॥೪॥

ಗುರು ವಿರಕ್ತರೆಂಬ ಭಾವ ಭ್ರಮೆಯ ತೊರೆಯಿರಿ
ಲಿಂಗವಿದ್ದ ನಾವೆಲ್ಲ ಒಂದೆ ಎನ್ನಿರಿ ॥೫॥

ಸತ್ಯವೆಂಬ ಹರಿತ ಖಡ್ಗ ಕೈಲಿ ಹಿಡಿಯಿರಿ
ಅಸತ್ಯ ಅನ್ಯಾಯಗಳ ಕಡಿದು ಚೆಲ್ಲಿರಿ ॥೬॥

ವೀರ ಗಣಾಚಾರ ತತ್ತ್ವ ನಮ್ಮದೆನ್ನಿರಿ
ಕ್ರೌರ್ಯವಲ್ಲ ಶೌರ್ಯವೆಂಬುದನ್ನು ತೋರಿರಿ ॥೭॥

ಶರಣಧರ್ಮಕ್ಕಾಗಿ ಪ್ರಾಣ ಪಣವ ನೀಡಿರಿ
ಹರಳಯ್ಯ ಮಧುವಯ್ಯಗಳ ಸ್ಮರಣೆ ಗೈಯಿರಿ ॥೮॥

ಹದ್ದು ಹಾವು ಕಾಗೆಯಂತೆ ಬಾಳಬೇಡಿರಿ
ಶರಣರೊಪ್ಪುವಂತೆ ಬಾಳಿ ಲಿಂಗೈಕ್ಯರಾಗಿರಿ ॥೯॥

- ವಿ. ಸಿದ್ಧರಾಮಣ್ಣ ಶರಣರು
ಅನುಭವ ಮಂಟಪ, ಬಸವ ಕಲ್ಯಾಣ

ಬಸವಲಿಂಗನ ಧ್ಯಾನ

[ರಾಗ-ಭೂಪ ತಾಳ-ದೀಪಚಂದ]

ಬನ್ನಿರೆಲ್ಲರು ಕೂಡಿ ಮಾಡುವ ಬಸವಲಿಂಗನ ಧ್ಯಾನವ
ಭವದ ಕೋಟಲೆ ಪರಿಹರಿಸುವ ದಿವ್ಯ ಮಂತ್ರದ ಘೋಷವ ॥ಪ॥

ಜಾತಿ ಭೂತದ ಭ್ರಮೆಯ ಬಿಡಿಸಿ ಸತ್ಯಧರ್ಮವನರುಹಿದ
ಸಮತಾ ತತ್ವದ ಬೀಜ ಬಿತ್ತಿದ ವಿಶ್ವ ಶಿಲ್ಪಿಯ ಭಜಿಸುವ ॥೧॥

ಸತ್ಯ ನುಡಿವುದೇ ದೇವಲೋಕವು ಮಿಥ್ಯ ನುಡಿವುದೆ ಮರ್ತ್ಯವು
ದೇವನೊಬ್ಬ ನಾಮಹಲವುವೆಂದರುಹಿದ ವರಗುರುವಿನ ॥೨॥

ದಯವೇ ಧರ್ಮದ ಮೂಲವೆನುತಲಿ ಪ್ರಾಣಿದಯವನು ತೋರಿದ
ಕಾಯಕದ ಮಹಾಮಂತ್ರ ಬೋಧಿಸಿ ಜಗದ ಗುರುವೆಂದೆನಿಸಿದ ॥೩॥

ಹೆಣ್ಣು ಶೂದ್ರಳು ಹೆಣ್ಣು ಮಾಯೆಯು ಎಂಬ ಶಾಸ್ತ್ರವ ಮೆಟ್ಟಿದ
ಹೆಣ್ಣು ತಾಯಿಯು ಹೆಣ್ಣು ದೇವಿಯು ಎಂದು ಕಣ್ಣನು ತೆರೆಸಿದ ॥೪॥

ಜಗಕೆ ಕಲ್ಯಾಣವನು ಮಾಡಲು ಮಹಾಮಂಟಪ ಕಟ್ಟಿದ
ನಿತ್ಯ ಅಗಣಿತ ಶರಣ ಗಣರಿಗೆ ಅನುಭಾವಾಮೃತ ಉಣಿಸಿದ ॥೫॥

ಯುಗ ಯುಗದಿ ಚಿರಬೆಳಕ ನೀಡಲು ವಚನ ಶಾಸ್ತ್ರವ ರಚಿಸಿದ
ಯುಗ ಯುಗದಿ ನಾನಿರುವೆನೆಂದು ಅಭಯ ವಾಣಿಯ ನೀಡಿದ ॥೬॥

ಮಾರಿ ಮಸಣಿಯು ದೇವರೆಂಬುವ ಮಾಯೆ ಭ್ರಮೆಯನು ಬಿಡಿಸಿದ
ನಿನ್ನ ನೀನೆ ತಿಳಿದು ನೋಡಲು ನೀನೆ ದೇವನು ಎನಿಸಿದ ॥೭॥

ಕಾಗೆ ಗೂಗೆಗಳಂತೆ ಸಾವಿರ ವರ್ಷ ಕಳೆವುದ ನಿಲಿಸಿದ
ಶರಣರೊಪ್ಪವ ತೆರದಿ ನಡೆದರೆ ಒಂದೇ ದಿನ ಸಾಕೆನಿಸಿದ ॥೮॥

ಉಣಲು ಕಲಿಸಿದ, ಉಡಲು ಕಲಿಸಿದ, ನಡೆನುಡಿಯ ತಾ ಕಲಿಸಿದ
ನುಡಿದಂತೆ ನಡೆದರೆ ಈ ಜನ್ಮವೇ ಕಡೆ ಎಂದೆನಿಸಿದ ॥೯॥

ಶಾಸ್ತ್ರ ಆಗಮ ತರ್ಕ ವೇದವ ಒರೆಗೆ ಹಚ್ಚಿ ತಾ ನೋಡಿದ
ಸರಿಯು ಬರದಿರೆ ಜೊಳ್ಳು ಎಂದವನೆಲ್ಲ ಗಾಳಿಗೆ ತೂರಿದ ॥೧೦॥

ಪ್ರೇಮಕ್ಕಿಂತಲೂ ದೈವ ಇಲ್ಲೆಂಬನುಭವದ ನುಡಿ ಹೇಳಿದ
ಪ್ರೇಮದಿಂದಲಿ ಬಾಳಿರೆನುತಲಿ ಪ್ರೇಮದೀಕ್ಷೆಯ ನೀಡಿದ ॥೧೧॥

ಜೀವ ಕೋಟಿಗಳೆಲ್ಲ ದೇವನ ಪ್ರತಿಯ ರೂಪೆಂದರುಹಿದ
ಶಿವದ ಕುರುಹಾದಿಷ್ಟ ಲಿಂಗವ ಎಲ್ಲರಿಗೆ ತಾ ಧರಿಸಿದ ॥೧೨॥

ತನುವಿಕಾರವ ಗೆಲಿದುದಿಷ್ಟ ಮನವ ಗೆದ್ದುದೆ ಪ್ರಾಣಲಿಂಗ
ಭಾವ ಭ್ರಮೆಯದು ಅಳಿದುದೇ ತ್ರೈಲಿಂಗ ಸಿದ್ಧಿಯು ಎನಿಸಿದ ॥೧೩॥

ಜಗದ ಜನತೆಯ ಮೊರೆಯ ಕೇಳಿ ಶಿವನೆ ತಾನವತರಿಸಿದ
ಅವರವರ ಭಾವದಲಿ ನೆಲೆಸಿ ಮೋಕ್ಷ ಸಂಪದ ನೀಡಿದ ॥೧೪॥

- ವಿ. ಸಿದ್ಧರಾಮಣ್ಣ ಶರಣರು

ಅಣ್ಣನ ಹೃದಯದ ಮಹಾಮನೆ

ಬನ್ನಿರಿ ಶರಣರೆ, ಬನ್ನಿರಿ ತೆರೆದಿದೆ
ಅಣ್ಣನ ಹೃದಯದ ಮಹಾಮನೆ।
ಹಿರಿಯರು ಕಿರಿಯರು, ದೀನರು ಧನಿಕರು
ಮಾನವರೆಲ್ಲರಿಗೆ ಮುಕ್ತೀ ಮನೆ ॥ಪ॥

ಅಂಗದ ಗುಣವನು ಹರಿಯಲು ಬನ್ನಿ
ಲಿಂಗದ ನೆಲೆಯನು ಅರಿಯಲು ಬನ್ನಿ।
ಜಾತಿಯ ಭೂತವ ಓಡಿಸ ಬನ್ನಿ
ಧರ್ಮದ ಮೂಲವ ತಿಳಿಯಲು ಬನ್ನಿ ॥೧॥

ಅಷ್ಟ ಮದಂಗಳ ಮೆಟ್ಟಲು ಬನ್ನಿ
ಅಷ್ಟಾವರಣವ ಪಡೆಯಲು ಬನ್ನಿ।
ಪಂಚ ಪಾತಕವ ಕಳೆಯಲು ಬನ್ನಿ
ಪಂಚಾಚಾರವ ತಿಳಿಯಲು ಬನ್ನಿ ॥೨॥

ಅರಿಷಡ್ಗುಣಗಳ ಗೆಲ್ಲಲು ಬನ್ನಿ
ಷಟ್‌ಸ್ಥಲ ಪೀಠವನೇರಲು ಬನ್ನಿ।
ಮಾನವ ಜನ್ಮವ ಸಾರ್ಥಕಗೊಳಿಸಲು
ತಂದೆ ಬಸವ ಗುರು ಪಾದಕೆ ಬನ್ನಿ ॥೩॥

ಹಡಪದ ಅಪ್ಪಣ್ಣ ಆಯ್ದಕ್ಕಿ ಮಾರಯ್ಯ
ಅಲ್ಲಮಪ್ರಭುಗಳ ನೋಡಲು ಬನ್ನಿ।
ಅಂಬಿಗ ಚೌಡಯ್ಯ ಅರುಹಿನ ಮಾರಯ್ಯ
ಹರಳಯ್ಯ ಶರಣರ ಪಾದಕ್ಕೆ ಬನ್ನಿ ॥೪॥

ಮೋಳಿಗೆ ಮಾರಯ್ಯ ಮಡಿವಾಳ ಮಾಚಯ್ಯ
ಚೆನ್ನಬಸವೇಶ್ವರನ ಕರುಣಗೆ ಬನ್ನಿ।
ಮಾದರ ಚೆನ್ನಯ್ಯ ಡೋಹಾರ ಕಕ್ಕಯ್ಯ
ಸಿದ್ಧರಾಮೇಶನ ಪಾದಕ್ಕೆ ಬನ್ನಿ ॥೫॥

ಕಿನ್ನರಿ ಬ್ರಹ್ಮಯ್ಯ ನುಲಿಯ ಚಂದಯ್ಯ
ಘಟ್ಟಿವಾಳಯ್ಯಗಳ ನೋಡಲು ಬನ್ನಿ।
ದಸರಯ್ಯ ಚಿಕ್ಕಯ್ಯ ಮೇದಾರ ಕೇತಯ್ಯ
ನನ್ನಯ್ಯ ಶರಣರ ಕಾಣಲು ಬನ್ನಿ ॥೬॥

ಗಂಗಮ್ಮ ನೀಲಮ್ಮ ಲಕ್ಕಮ್ಮ ಅಕ್ಕಮ್ಮ
ಅಕ್ಕಮಹಾದೇವಿಯರ ಪಾದಕೆ ಬನ್ನಿ।
ಮೋಳಿಗೆ ಮಹಾದೇವಿ, ಮುಕ್ತಾಯಿ ಲಿಂಗಮ್ಮ
ಶರಣ ತಾಯಿಗಳ ಕರುಣೆಗೆ ಬನ್ನಿ ॥೭॥

- ವಿ. ಸಿದ್ಧರಾಮಣ್ಣ ಶರಣರು

ಬಾ ಬಸವ ಗುರುವೆ ನೀನೊಲಿದೆಮಗೆ

[ರಾಗ-ಚಾಂದ್ ತಾಳ-ದೀಪಚಂದ]

ಶಿವ ಶಿವ ಶಿವ ಎಂದು ಶಿವಧ್ಯಾನ ಗೈವಾಗ
ಶಿವನೆ ಬಂದಾನವ್ವ ಕಲ್ಯಾಣಕೆ।
ಶಿರ ಬಾಗಿ ಶಿವನಕಾಣೋನು ನಡೀರೆವ್ವ ॥೧॥

ಕಲ್ಯಾಣವೆಂಬುದು ಕೈಲಾಸವಾಯ್ತವ್ವ
ಅಲ್ಲಿರ್ಪ ಶಿವನು ಬಸವೇಶ।
ಆತನ ನಾಮವನನುದಿನ ನೆನಿರೆವ್ವ ॥೨॥

ಬೆಳಕು ಕಾಣದೆ ಜಗವು ಬಳಲುತ್ತ ಇರುವಾಗ
ಬಂದಾನ ಶಿವನು ಬಸವಾಗಿ
ಭಕ್ತರ ಭವದ ಬಂಧನವ ಬಿಡಿಶ್ಯಾನೆ ॥೩॥

ಕುಲ ಕುಲ ಕುಲವೆಂದು ಕೂಗಾಡುತ್ತಿರುವಾಗ
ಕುಲದ ನೆಲೆಯನ್ನು ತಿಳಿಶ್ಯಾನೆ।
ಬಸವಣ್ಣ ಕುಲದ ಬಣ್ಣವನು ಅಳಿಶ್ಯಾನೆ ॥೪॥

ಜಾತಿಯ ಭೂತದ ಕತ್ತಲೆಯ ಕಳೆಯುತ
ಜ್ಯೋತಿ ಪ್ರಕಾಶವ ಬೀರ್ಯಾನೆ।
ಭುವನಕ್ಕೆ ಮಹತತ್ವ ಉಪದೇಶ ಪೇಳ್ಯಾನೆ ॥೫॥

ಸರ್ವ ಜೀವಿಗಳೊಳು ಇರುವಂಥ ಆತ್ಮವೆ
ಲಿಂಗಸೂತ್ರವೆಂದು ತಿಳಿಶ್ಯಾನೆ
ಸೂತ್ರದೋಳ್ ಸರ್ವ ಜೀವಿಗಳ ಹೆಣೆದಾನೆ ॥೬॥

ಹೆಣ್ಣಿಲ್ಲ ಗಂಡಿಲ್ಲ ಹಿರಿಯಿಲ್ಲ ಕಿರಿಯಿಲ್ಲ
ವಸ್ತು ಒಂದೇ ಎಂದು ಹೇಳ್ಯಾನೆ।
ಬಸವಣ್ಣ ಜಗದ ಕಣ್ಣನ್ನು ತೆರೆಸ್ಯಾನೆ ॥೭॥

ಕಾಣಲಾರದ ಶಿವನ ಕಾಣಿಸಿ ಕೊಟ್ಟಾನ
ಕೈಯೊಳಗೆ ಇಷ್ಟ ಲಿಂಗವ ಇಟ್ಟಾನ।
ಇದರೊಳು ಜಗವೆಲ್ಲ ಇದೆಯೆಂದು ತಿಳಿಶ್ಯಾನೆ ॥೮॥

ಇಷ್ಟಲಿಂಗದ ಗುಟ್ಟು ಮನಮುಟ್ಟಿ ಹೇಳ್ಯಾನ
ಶ್ರೇಷ್ಠ ಜಗದ್ಗುರು ಬಸವಣ್ಣನು।
ಜಂಗಮದ ಮೂಲ ಕೀಲವ ಹೇಳ್ಯಾನ ॥೯॥

ಜಗದೊಳ ಹೊರಗೆಲ್ಲ ತುಂಬಿ ಬಿಂಬಿಸುವಂಥ
ತತ್ವ ಜಂಗಮವೆಂದು ತಿಳಿಶ್ಯಾನೆ।
ಜಗದೆಲ್ಲ ಮೂಢ ಕಲ್ಪನೆಯ ಅಳಿಶ್ಯಾನೆ ॥೧೦॥

ಶಿವನು ನಿರಾಕಾರ ಭಕ್ತನೆ ಸಾಕಾರ
ಶಿವನೆಂದು ಉಪದೇಶ ಪೇಳ್ಯಾನೆ।
ಭಕ್ತಂಗೆ ಸರಿಕಾಣೆನೆಂದು ಹೇಳ್ಯಾನೆ ॥೧೧॥

ಭಕ್ತನ ಮುಖದೊಳು ಲಿಂಗವ ಕಾಣೆಂದು
ಅಪ್ಪ ಬಸವಣ್ಣ ನುಡಿದಾನ।
ಭಕ್ತನಕಾಯ ಕೈಲಾಸೆಂದು ಸಾರ್‍ಯಾನೆ ॥೧೨॥

ನುಡಿದಂಥ ಮಾತನ್ನ ನಡೆಯಲ್ಲಿ ತಂದಾನೆ
ತಂದೆ ಕಲ್ಯಾಣ ಬಸವಣ್ಣ।
ಕಾಯಕದ ಅಂದದ ಗುಟ್ಟು ತಿಳಿಶ್ಯಾನೆ ॥೧೩॥

ಲಿಂಗವೇ ತಾನಾಗಿ ಲಿಂಗಕ್ಕಾಗಿಯೇ ಮಾಡ್ವ
ಮಂಗಲ ಬದುಕೆ ಕಾಯಕವೆಂದು।
ಸದ್ಗುರು ಸಂಗನ ಬಸವಣ್ಣ ಹೇಳ್ಯಾನೆ ॥೧೪॥

ಮೃದು ವಚನವೆ ತಪ ಮೃದು ವಚನವೆ ಜಪ
ಸದುವಿನಯವೆ ಶಿವನೊಲಿಮೆಯೆಂದು।
ನಡೆನುಡಿ ಸರ್ವಾಚಾರವನು ಕಲಿಶ್ಯಾನೆ ॥೧೫॥

ನುಡಿದಂತೆ ನಡೆದರೆ ಇದೆ ಜನ್ಮ ಕಡೆ ಎಂದು
ಕಡೆಯ ನುಡಿಯನ್ನು ನುಡಿದಾನೆ।
ಶಿವಯೋಗ ಸಿದ್ಧಿ ಇದೆ ಎಂದು ಪೇಳ್ಯಾನೆ ॥೧೬॥

ಅಷ್ಟಾವರಣವೆ ಅಂಗ ಪಂಚಾಚಾರವೆ ಪ್ರಾಣ
ಷಟಸ್ಥಲವೆ ಆತ್ಮ ತಾನಾಗಿ।
ನಿಂತವನೆ ಲಿಂಗವಂತನೆಂದು ನುಡಿದಾನೆ ॥೧೭॥

ಆತ್ಮದರಿವೆ ಗುರು ಅದರಾಚಾರವೆ ಲಿಂಗ
ಕೂಟಾನಂದವೆ ಜಂಗಮವೆಂದು।
ಗುರುಲಿಂಗ ಜಂಗಮದಮೃತ ಉಣಿಶ್ಯಾನೆ ॥೧೮॥

ಗುರುವಿಗೆ ತನುವನ್ನು ಲಿಂಗಕ್ಕೆ ಮನವನ್ನು
ಜಂಗಮಕ್ಕೆ ಭಾವಧನವ
ನರ್ಪಿಸು ಎಂದು ಅರ್ಪಣ ವಿಧಿಯನ್ನು ತಿಳಿಶ್ಯಾನೆ ॥೧೯॥

ಆಶಾಕೊನೆಯನು ಹರಿದು ಭಾವದ ಬೀಜವ ಹುರಿದು
ನಿಂತ ಮುಕ್ತನೆ ಸದ್ಭಕ್ತೆಂದು।
ನಿಜವಾದ ಭಕ್ತಸ್ಥಲದ ಗುಟ್ಟು ತಿಳಿಶ್ಯಾನೆ ॥೨೦॥

ಮಾಯಾ ಮೋಹವ ಮೀರಿ ಕಾಮಾದಿಗಳ ತೂರಿ
ಲಿಂಗದೊಳಗೆ ನಿಜಮನ ಸೇರಿ।
ನಿಂತವನೆ ಮಾಹೇಶ್ವರನೆಂದು ತಿಳಿಶ್ಯಾನೆ ॥೨೧॥

ಅಂಗದಿಂದ್ರಿಯವೆಲ್ಲ ಲಿಂಗದಿಂದ್ರಿಯವಾಗಿ
ಲಿಂಗದಪ್ರಭೆ ಒಳ ಹೊರಗೆಲ್ಲ।
ಬೆಳಗಲು ಪ್ರಸಾದಿ ತಾನೆಂದು ನುಡಿದಾನೆ ॥೨೨॥

ಲಿಂಗವೆ ಪ್ರಾಣಾಗಿ ಪ್ರಾಣ ಲಿಂಗವಾಗಿ
ಪ್ರಾಣ ಲಿಂಗ ಸಮರಸವಾಗಿ।
ನಿಂದಾತ ಪ್ರಾಣಲಿಂಗಿ ಎಂದೊರೆದಾನೆ ॥೨೩॥

ಲಿಂಗವೆ ಪತಿಯಾಗಿ ತಾನದಕ ಸತಿಯಾಗಿ
ಕೂಟದೋಳ್ಚಿದಾನಂದ ಮಯನಾಗಿ।
ನಿಂದುದೆ ಶರಣಸ್ಥಲವೆಂದು ನುಡಿದಾನೆ ॥೨೪॥

ಸಕಲದರೊಳೇಕಾಗಿ, ಸಕಲವೇ ತಾನಾಗಿ
ಸಕಲ ನಿಷ್ಕಲಿಂಗ ಪ್ರಭೆಯಾಗಿ।
ನಿಂದಾತ ಐಕ್ಯನೆಂದು ವಾಕ್ಯಪೇಳ್ಯಾನೆ ॥೨೫॥

ಬಸವನ ನೆನೆದರೆ ಬಾಳೆಲ್ಲ ಹಸನವ್ವ
ಬಯಲಾಗ್ಹೋದೀತ ಬಡತನ।
ಕಲ್ಯಾಣ ಬಸವನ ನಾಮವ ನೆನಿರವ್ವ ॥೨೬॥

ಶರಣರ ನೆನೆದರೆ ಶನಿಯೆಲ್ಲ ಹರಿದೀತೆ
ಮರಣದ ಭೀತಿ ತಪ್ಪೀತ।
ಕಲ್ಯಾಣ ಕೈಲಾಸ ಬಾಗಿಲು ತಗದೀತೆ ॥೨೭॥

– ಎ. ಸಿದ್ಧರಾಮಣ್ಣ ಶರಣರು

ಬಸವ ಧರ್ಮದ ಷಟ್‌ಸ್ಥಲ ಧ್ವಜಗೀತೆ

ರಾಗ - ಭೂಪ ತಾಳ - ಕೇರವ

ಏರುತಿದೆ... ಹಾರುತಿದೆ
ಷಟ್‌ಸ್ಥಲ ಧ್ವಜವು ಮೆರೆಯುತಿದೆ.
ವಿಶ್ವ ಜೀವರನು ತನ್ನಯ ಗರ್ಭದಿ
ಹೊತ್ತ ಬಸವ ಧ್ವಜ ಹಾರುತಿದೆ

ಸಮತಾತತ್ವವ ಜಗದಲಿ ಸಾರಿದ
ಸತ್ಯ ಅಹಿಂಸೆಯ ನಡೆಯಲಿ ತೋರಿದ
ದಯವೇ ಧರ್ಮದ ಮೂಲವೆಂದುಲಿದ
ಕಲ್ಯಾಣ ಧ್ವಜವು ಹಾರುತಿದೆ ||೧||

ಮೋಳಿಗೆಯ ಮಾರಯ್ಯ ಮಡಿವಾಳ ಮಾಚಯ್ಯ
ಮಾದರ ಚೆನ್ನಯ್ಯ ಡೋಹಾರ ಕಕ್ಕಯ್ಯ
ಹರಳಯ್ಯ ಮೊದಲಾದ ಭಕ್ತರನೆಲ್ಲ
ಜಂಗಮ ಸ್ಥಲಕ್ಕೆ ಎತ್ತಿದ ಧ್ವಜವು ||೨||

ವ್ಯೋಮ ಕಾಯ ಸಿದ್ಧ ಅಲ್ಲಮ ಪ್ರಭುವು
ವೀರ ಗಣಾಚಾರಿ ಅಂಬಿಗರ ಚೌಡಯ್ಯ
ಕಾಯಕ ಜ್ಯೋತಿ ನುಲಿಯ ಚಂದಯ್ಯ
ಅಗಣಿತ ಮಹಿಮರ ಪ್ರೀತಿಯ ಧ್ವಜವು ||೩||

ಕ್ರಾಂತಿಯ ಗಂಗೋತ್ರಿ ಅಕ್ಕನಾಗಾಯಿ
ನಿರಂಜನ ಜ್ಯೋತಿ ನೀಲಮ್ಮ ತಾಯಿ
ಸತ್ಯಕ್ಕ ಲಿಂಗಮ್ಮ ಶರಣೆ ಮುಕ್ತಾಯಿ
ಜ್ಞಾನ ಗುರು ಅಕ್ಕಮಹಾದೇವಿ ಧ್ವಜವು ||೪||

ವಚನ ಸಾರದ ಹಾಲ್ಹೊಳೆ ಹರಿಸಿದ
ವಾದ ಭೇದವನು ಕಾಲಲಿ ಮೆಟ್ಟಿದ
ಕಾಯಕ ಕೈಲಾಸ ಮಂತ್ರ ಬೋಧಿಸಿದ
ಕರುಣಾಳು ಗುರು ಚೆನ್ನಬಸವರ ಧ್ವಜವು ||೫||

- ಎ. ಸಿದ್ಧರಾಮಣ್ಣ ಶರಣರು

ಬಸವ ಗುರು-ಮಂಗಲ

ಬಸವ ಭಾನುವೆ ಶಿವನ ತೇಜವೆ ಎಮ್ಮ ಬಾಳಿನ ದೀಪವೆ
ವಸುಧೆಗವಿಚಲ ಶಾಂತಿಯನ್ನೊಸೆದೀಯು ಭಕ್ತಿಯ ರೂಪವೆ ॥ಪ॥

ಭಕ್ತಿ ಸತ್ಪಥ ಸಾರದೋರುತ ಭಕ್ತಿ ಸಾಧಕರೆನ್ನಿಸು ।
ಸೂಕ್ತ ವಚನವ ನಮಗೆ ಬೋಧಿಸಿ ಆತ್ಮಶೋಧಕರೆನ್ನಿಸು ॥
ಮುಕ್ತರಾಗದೆ ಭವದ ಗಾಣವ ಸುತ್ತಿನೊಂದೆವು ತಪ್ಪಿಸು ।
ಮುಕ್ತಿ ಹೊಂದಲು ಶಕ್ತರಾಗಿರುವಂತೆ ನಮ್ಮನು ರೂಪಿಸು ॥೧॥

ನಮ್ಮ ಕಣ್ಣಿಗೆ ಮೋಹವೆಂಬುವ ಮಂಜು ಮುಸುಕಿದೆ ಕರಗಿಸು ।
ಹಮ್ಮು ಬಿಮ್ಮಿನ ಹಾವು ಕಚ್ಚಿದ ನಂಜು ಮುಸಗಿದೆ ಅರಗಿಸು ॥
ನಿಮ್ಮ ಸೊಮ್ಮನು ನಿಮಗೆ ಅರ್ಪಿಪ ದಿವ್ಯಭಾವದಿ ಮಿರುಗಿಸು ।
ಒಮ್ಮನದಿ ಪರಬೊಮ್ಮ ಹೊಮ್ಮುವ ತಪಕೆ ನಮ್ಮನು ತಿರುಗಿಸು ॥೨॥

ಲೋಗರೆಲ್ಲರ ಶರಣರಾಗಿಸಿ ದಿವ್ಯ ದೃಷ್ಟಿಯ ದೀಪಿಸು ।
ತ್ಯಾಗ ಬಲ್ಲಿದರೊಗೆಯುವೊಲು ಜಗ ಹೃದಯ-ಹೃದಯವ ವ್ಯಾಪಿಸು॥
ಯೋಗಪ್ರಭೆಯಲ್ಲಿ ತಾನೆ ಶಿವನಪ್ಪಾತ್ಮ ಭಕ್ತಿಯ ಕೀಲಿಸು ।
ಮಾಗಿದೊಡನೆಯೆಜ್ಯೋತಿ-ಜ್ಯೋತಿಯ ಬೆರೆವಭಾಗ್ಯಕೆ ತೇಲಿಸು ॥೩॥

(ರಚನೆ- ಶ್ರೀ ಈಶ್ವರ ಸಣಕಲ್ಲ ರಬಕವಿ)

ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ
ಲಿಂಗತತ್ವ ನಿರ್ಣಯ ಪರಮಾವತಾರ
ಶರಣಾಗತ ರಕ್ಷಕ ಚಿದ್ಘನ ಪ್ರಭಾಮಯ
ಜಗದಾದಿದೇಶಿಕ ಪುರಾತನ ಪುಂಗವ
ಶಾಂಭವೈ ಪುರಾಶ್ರಯ ಜಯ ಸೋಮನಾಥ
ಜಯದೇವ ಜಯಾ ವಿರತಂ ಶಿವಾಧವಾ ॥

ಬಸವಣ್ಣನವರ ವಚನಗಳು

೧

ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ
ತಪ್ಪುವವು ಅಪಮೃತ್ಯು ಕಾಲ ಕರ್ಮಂಗಳಯ್ಯಾ !
ದೇವಪೂಜೆಯ ಮಾಟ, ದುರಿತಬಂಧನ ದೋಟ !
ಶಂಭು ನಿಮ್ಮಯ ನೋಟ, ಹೆರೆಹಿಂಗದ ಕಣ್ಬೇಟ !
ಸದಾ ಸನ್ನಿಹಿತನಾಗಿ ಶರಣೆಂಬುವುದು, ನಂಬುವದು,
ಜಂಗಮಾರ್ಚನೆಯ ಮಾಟ ಕೂಡಲಸಂಗನ ಕೂಟ

೨

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನುಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ,
ಮೃತ್ಯು ಮುಟ್ಟದ ಮುನ್ನ ಪೂಜಿಸು
ಕೂಡಲಸಂಗಮದೇವನ.

೩

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು,
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವನು ತಾ ಮಾಡಬೇಕಲ್ಲದೇ;
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ ?

೪

ಕಳಬೇಡ, ಕೊಲಬೇಡ, ಹುಸಿಯನುಡಿಯಲುಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ

೫

ಹೊತ್ತಾರೆ ಎದ್ದು ಶಿವಲಿಂಗದೇವನ
ದೃಷ್ಟಿಯಾರೆ ನೋಡದವನ ಸಂಸಾರವೇನವನ ?
ಬಾಳುವೆಣನ ಬೀಳುವೆಣನ ಸಂಸಾರವೇನವನ ?
ಕರ್ತೃ ಕೂಡಲಸಂಗಮದೇವಾ
ನಿಮ್ಮ ತೊತ್ತುಗೆಲಸ ಮಾಡದವನ ಸಂಸಾರವೇನವನ ?

೬

ವಾರವೆಂದರಿಯೆ, ದಿನವೆಂದಿರೆಯ,
ಏನೆಂದರಿಯೆನಯ್ಯಾ ;
ಇರುಳೆಂದರಿಯೆ, ಹಗಲೆಂದರಿಯೆ,
ಏನೆಂದರಿಯೆನಯ್ಯಾ,
ನಿಮ್ಮುವ ಪೂಜಿಸಿ ಎನ್ನುವ ಮರೆದೆ
ಕೂಡಲಸಂಗಮದೇವಾ.

೭

ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ,
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ !
ಕೂಡಲಸಂಗಮದೇವಾ, ಎನಗಿದೇ ದಿಬ್ಯ.

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧.	ಅಲ್ಲಮಪ್ರಭುದೇವರ ಜೀವನ ಸಂದೇಶ	೧೯೭೯
೨.	ಅಕ್ಕಮಹಾದೇವಿಯ ಜೀವನ ದರ್ಶನ	೧೯೭೯
೩.	ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ	೧೯೭೯
೪.	ಲಿಂಗಾಯತ ಧರ್ಮದ ಮೂಲತತ್ವಗಳು	೧೯೭೯
೫.	ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ)	೧೯೭೯
೬.	ಗಣನಾಯಕ ಮಡಿವಾಳ ಮಾಚಿದೇವರು	೧೯೭೯
೭.	ಮರಣವೇ ಮಹಾನವಮಿ	೧೯೮೦
೮.	ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು	೧೯೮೦
೯.	ಬಸವಬೆಳಗು (ಸಂಪಾದಿತ)	೧೯೮೦
೧೦.	ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು	೧೯೮೦
೧೧.	ವಚನ ಸಂಶೋಧನ ಪಿತಾಮಹ ಫ. ಗು. ಹಳಕಟ್ಟಿಯವರು	೧೯೮೧
೧೨.	ಬಸವಣ್ಣನವರ ಬಯ್ಗುಳಗಳು	೧೯೮೧
೧೩.	ಅಕ್ಕ ಕಂಡ ಅಣ್ಣ	೧೯೮೧
೧೪.	ಅಂಬಿಗರ ಚೌಡಯ್ಯ	೧೯೮೧
೧೫.	ಶರಣರ ಶಿವರಾತ್ರಿ	೧೯೮೨
೧೬.	ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ	೧೯೮೨
೧೭.	ಬಸವಾದಿ ಶರಣರ ವಚನಾಮೃತ (ಸಂಪಾದಿತ)	೧೯೮೩
೧೮.	ವಿಭೂತಿ ನಿರ್ಮಾಣ ವಿಧಾನ	೧೯೮೪
೧೯.	ಬಾಚಿಕಾಯಕದ ಬಸವಪ್ಪ ಕಾಳವ್ವೆ	೧೯೮೪
೨೦.	ಶರಣರು ಹಾಗೂ ಮೂಢನಂಬಿಕೆಗಳು	೧೯೮೪
೨೧.	ಇಷ್ಟಲಿಂಗ ನಿರ್ಮಾಣ ವಿಧಾನ	೧೯೮೫
೨೨.	ಹಡಪದ ಅಪ್ಪಣ್ಣ-ಲಿಂಗಮ್ಮರು	೧೯೮೫
೨೩.	ಶ್ರೀ ಗುರುಸಿದ್ದಪ್ರಭುದೇವರು	೧೯೮೫
೨೪.	ಇಷ್ಟಲಿಂಗ ಪೂಜಾವಿಧಾನ	೧೯೮೫
೨೫.	ಫಕ್ಕೀರಪ್ಪ ಮುರಗೋಡ ಮಾಸ್ತರು	೧೯೮೫
೨೬.	ಶಿವಶರಣರ ಕ್ರಾಂತಿ (ಕ.ವಿ.ವಿ. ಪ್ರಕಟಣೆ)	೧೯೮೬
೨೭.	ವಿಶ್ವಗುರು ಬಸವಣ್ಣನವರ ವಚನಗಳು (ಸಂಪಾದಿತ)	೧೯೮೬
೨೮.	ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರು	೧೯೮೬
೨೯.	ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು	೧೯೮೭
೩೦.	ಬಸವದರ್ಶನ (ಸಂಪಾದಿತ)	೧೯೮೭
೩೧.	ವಚನಸಾಹಿತ್ಯ : ತಾತ್ವಿಕ ವಿವೇಚನೆ	೧೯೮೭
೩೨.	ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು	೧೯೮೮
೩೩.	ಧರ್ಮಗುರು ಜಗಜ್ಯೋತಿ ಬಸವಣ್ಣನವರು	೧೯೮೮

೩೪.	ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ)	೧೯೮೯
೩೫.	ಬಸವಣ್ಣನವರು ಮತ್ತು ಜಾಗತಿಕ ಶಾಂತಿ	೧೯೮೯
೩೬.	ಬಸವಭಕ್ತ ಘನಮಠ ಶಿವಯೋಗಿಗಳು	೧೯೮೯
೩೭.	ಚೆನ್ನಬಸವಣ್ಣನವರ ವಚನಗಳು (ಸಂಪಾದಿತ)	೧೯೮೯
೩೮.	ಬಸವಭಕ್ತ ಅಥಣಿ ಶಿವಯೋಗಿಗಳು	೧೯೮೯
೩೯.	ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು	೧೯೮೯
೪೦.	ಸಿದ್ಧರಾಮೇಶ್ವರ ವಚನಗಳು (ಸಂಪಾದಿತ)	೧೯೯೦
೪೧.	ಡಾ. ಜಚನಿ ಅಂದು-ಇಂದು : ಒಂದು ವಿಮರ್ಶೆ	೧೯೯೦
೪೨.	ಶ್ರೀ ಗುರುಬಸವ ಮಂಟಪ ನಡೆದು ಬಂದ ದಾರಿ	೧೯೯೧
೪೩.	ಮುರಗೋಡ ಮಹಾಂತಜ್ಜನವರು	೧೯೯೨
೪೪.	ಬಸವಕಲ್ಯಾಣ ದರ್ಶನ	೧೯೯೪
೪೫.	ಮಹಾಚೈತ್ರ (ವಿಮರ್ಶೆ)	೧೯೯೪
೪೬.	ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ)	೧೯೯೬
೪೭.	ಬಸವ ವಚನ ದೀಪ್ತಿ-ಒಂದು ವಿಮರ್ಶೆ	೧೯೯೬
೪೮.	ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ)	೧೯೯೭
೪೯.	ಕುಮಾರ ಕಕ್ಕಯ್ಯ ಪೋಳ	೧೯೯೮
೫೦.	ಬೀಳೂರು ಗುರುಬಸವ ಮಹಾಸ್ವಾಮಿಗಳು	೧೯೯೮
೫೧.	ಜೇಡರ ದಾಸಿಮಯ್ಯ ದುಗ್ಗಳೆಯರ ವಚನಗಳು (ಸಂ)	೧೯೯೮
೫೨.	ಬಸವಾದಿ ಶರಣರ ಶಿವಯೋಗದ ವಚನಗಳು (ಸಂ)	೧೯೯೯
೫೩.	ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು	೨೦೦೦
೫೪.	ಬಂಥನಾಳ ಸಂಗನಬಸವ ಶಿವಯೋಗಿಗಳು	೨೦೦೦
೫೫.	ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ	೨೦೦೧
೫೬.	ಶರಣ ಕುಮಾರ ಕಕ್ಕಯ್ಯ (ಮಕ್ಕಳ ಸಾಹಿತ್ಯ)	೨೦೦೧
೫೭.	ಬಸವ ಬೆಳೆ	೨೦೦೨
೫೮.	ಶಿವಯೋಗಿ ವೇಮನರ ವಚನಗಳು (ಸಂ)	೨೦೦೩
೫೯.	ಕನ್ನಡ ಕವಿಕಾವ್ಯ ಪರಂಪರೆ (ಸಂ)	೨೦೦೪
೬೦.	ದರ್ಪಣ - ಸ್ಮರಣ ಸಂಚಿಕೆ (ಸಂ)	೨೦೦೪
೬೧.	ಲಿಂಗಾಯತ ಧರ್ಮ ದರ್ಶನ	೨೦೦೫
೬೨.	ಕಾಯಕ ಸಂಜೀವನಿ (ಸಂ)	೨೦೦೬
೬೩.	ಬಸವಣ್ಣನವರು (ಬಸವ ಸಮಿತಿ ಬೆಂಗಳೂರು ಪ್ರಕಟಣೆ)	೨೦೦೭
೬೪.	ನೆನಹು- ಡಾ. ಕರ್ಕಿ ಹಾಗೂ ಸಣಕಲ್ಲರ ಸ್ಮರಣ ಗ್ರಂಥ (ಸಂ)	೨೦೦೮
೬೫.	ಡಾ. ಡಿ. ಎಸ್. ಕರ್ಕಿ ಜೀವನ ಸಾಧನೆ	೨೦೦೮
೬೬.	ಬಸವಜ್ಯೋತಿ ಮಹಾಂತ ಶಿವಯೋಗಿಗಳು	೨೦೧೧
೬೭.	ವಿಜಯ ಮಹಾಂತ ಶಿವಯೋಗಿಗಳು	೨೦೧೨
೬೮.	ವಚನ ಶ್ರಾವಣ	೨೦೧೩
೬೯.	ಬಸವಾನುಭಾವಿ (ಸಂಪಾದಿತ)	೨೦೧೩

ಇಷ್ಟಲಿಂಗ ಪೂಜಾ ವಿಧಾನ

'ಜಗಜ್ಯೋತಿ ಬಸವೇಶ್ವರ' ವಚನಾಂಕಿತದಲ್ಲಿ ವಚನಗಳನ್ನು ರಚಿಸಿ, ಆಧುನಿಕ ವಚನಕಾರರರಲ್ಲಿ ಒಬ್ಬರಾಗಿರುವ, ಬಸವತತ್ವನಿಷ್ಠ **ಶರಣ ಪ್ರೊ. ಸಿದ್ಧಣ್ಣ ಲಂಗೋಟಿ,** ಚಾಂದಕವಠೆ ಗ್ರಾಮದ ಕೃಷಿ ಕುಟುಂಬದಲ್ಲಿ ೧೯೫೫ ರಲ್ಲಿ ಜನಿಸಿದರು.

ವಿಜ್ಞಾನ, ತತ್ವಜ್ಞಾನ, ಕಾನೂನು, ಸಾಹಿತ್ಯ ಯೋಗಗಳಲ್ಲಿ ಸ್ನಾತಕ ಶಿಕ್ಷಣ ಪಡೆದು, ಬಸವ ತತ್ವ ಪ್ರಸಾರದ ಮಹಾಮಣಿಹ ಪೂರೈಸುತ್ತಿದ್ದಾರೆ.

ಸುಜ್ಞಾನ-ಸತ್ಕ್ರಿಯೆ-ಸ್ವಾನುಭಾವದ ಶರಣ ಜೀವಿಗಳಾಗಿರುವ ಸಿದ್ಧಣ್ಣನವರು ಬಸವತತ್ವ ಪ್ರಸಾರ ಸಂಸ್ಥೆಯ ಸ್ಥಾಪಕ ಪ್ರಧಾನಕಾರ್ಯದರ್ಶಿಯಾಗಿ, ಶಿವಾನುಭವ ಪತ್ರಿಕೆಯನ್ನು ಮರಳಿ ಪ್ರಾರಂಭಿಸಿ ಸಂಪಾದಕರಾಗಿ ಮಹತ್ವದ ಪಾತ್ರವಹಿಸಿದರು. ಶರಣ ಸಿದ್ಧಾಂತ ವಿದ್ಯಾಪೀಠದ ಸಂಚಾಲಕರಾಗಿ ಕಳೆದ ೩೫ ವರುಷಗಳಿಂದ ಶಿವಾನುಭವ ಶಿಬಿರಗಳನ್ನು ಸಂಘಟಿಸುತ್ತಾ ಬಂದಿದ್ದಾರೆ. ೧೯೯೦ರಲ್ಲಿ ಇಳಕಲ್ಲ ಹಿರಿಯ ಪೂಜ್ಯರೊಂದಿಗೆ ಇಂಗ್ಲೆಂಡ ಪ್ರವಾಸ ಮಾಡಿ 'ಬಸವ ಇಂಟರ್‌ನ್ಯಾಷನಲ್ ಫೌಂಡೇಶನ್ ಲಂಡನ್' ಸ್ಥಾಪಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ೨೦೦೦ ಇಸ್ವಿಯಲ್ಲಿ ಇಂಗ್ಲೆಂಡ - ಅಮೇರಿಕಾ -ಫ್ರಾನ್ಸ್ -ಕೆನಡಾ -ಜರ್ಮನ್ -ಹಾಲಂಡ-ಇಟಲಿ - ವೆಟಿಕನ್-ಸಿಂಗಾಪೂರ- ಆಸ್ಟ್ರೀಯಾ-ಅರಬ್ ಮುಂತಾದ ೧೮ ರಾಷ್ಟ್ರಗಳಿಗೆ ಹೋಗಿ ಬಸವತತ್ವ ಪ್ರಸಾರಗೈದು ಬಂದಿದ್ದಾರೆ.

ಇಳಕಲ್ಲ ಶ್ರೀಮಠದ 'ಬಸವಬೆಳಗು' ಪತ್ರಿಕೆಯ ಗೌ. ಸಂಪಾದಕರಾಗಿ ೨೬ ವರುಷಗಳಿಂದ ಸೇವೆ, ಬಸವಾದಿ ಶರಣರ ಧರ್ಮ, ಸಾಹಿತ್ಯ, ತತ್ವಜ್ಞಾನ, ಶಿಕ್ಷಣ, ಯೋಗ ಕುರಿತು ೬೮ಕ್ಕೂ ಮಿಕ್ಕಿ ಗ್ರಂಥಗಳ ರಚನೆ, ಸಂಪಾದನೆ ಮಾಡಿದ್ದಾರೆ. ಶರಣ ಸಿದ್ಧಾಂತ ವಿದ್ಯಾಪೀಠ, ಮಹಾಂತ ಜೋಳಿಗೆ ಕಾರ್ಯಕ್ರಮಗಳ ಸಂಚಾಲಕ, ಸಂಯೋಜಕರಾಗಿ ಪೂಜ್ಯ ಮಹಾಂತ ಶಿವಯೋಗಿಗಳ ಕೃಪೆಗೆ ಪಾತ್ರರಾಗಿದ್ದಾರೆ.

- ಶ್ರೀ ಮ.ನಿ.ಪ್ರ. ಗುರುಮಹಾಂತಸ್ವಾಮಿಗಳು
ಚಿತ್ತರಗಿ ಸಂಸ್ಥಾನಮಠ, ಇಳಕಲ್
ಸಂಗನಬಸವ ಮಠ ಸವದಿ (ಅಥಣಿ)